Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 20-11-2020



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 20-11-2020 |
| --- | --- |
| Page No | 3 |



ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 20-11-2020 |
|---|---|
| Page No | 6 |

# ಕೋವಿಡ್ –19: ಐಸಿಯುಗೆ ದಾಖಲಾಗುವವರ ಸಂಖ್ಯೆ ಇಳಿಕೆ

ಬೆಂಗಳೂರು: ಕೋವಿಡ್ ಪೀಡಿತರಲ್ಲಿ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಸಂಖ್ಯೆ ಎರಡು ವಾರಗಳಿಂದ ಇಳಿಮುಖವಾಗಿದ್ದು, ಸದ್ಯ 598 ಮಂದಿ ಐಸಿಯುನಲ್ಲಿ ಇದ್ದಾರೆ.

ರಾಜ್ಯದಲ್ಲಿ ಗುರುವಾರ 1,849 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಸೋಂಕಿಗೀಡಾದವರ ಒಟ್ಟು ಸಂಖ್ಯೆ 8.67 ಲಕ್ಷಕ್ಕೆ ಏರಿಕೆಯಾಗಿದೆ. ಈ ತಿಂಗಳ 19 ದಿನಗಳ ಅವಧಿಯಲ್ಲಿ 44,368 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಈ ಅವಧಿಯಲ್ಲಿ ಪ್ರತಿನಿತ್ಯ ಸರಾಸರಿ 2,335 ಮಂದಿ ಸೋಂಕಿತರಾಗಿದ್ದಾರೆ. ಕೋವಿಡ್ ಪೀಡಿತರಲ್ಲಿ 26 ಮಂದಿ ಮೃತಪಟ್ಟಿದ್ದು, ಸಾವಿಗೀಡಾದವರ ಒಟ್ಟು ಸಂಖ್ಯೆ 11,604ಕ್ಕೆ ತಲುಪಿದೆ.

ಬೆಂಗಳೂರಿನಲ್ಲಿ 881 ಮಂದಿ ಸೇರಿದಂತೆ ರಾಜ್ಯದಲ್ಲಿ 1,800 ಮಂದಿಗೆ ಕಾಯಿಲೆ ವಾಸಿಯಾಗಿದೆ. ಇದರಿಂದಾಗಿ ಗುಣಮುಖರ ಸಂಖ್ಯೆ 8.30 ಲಕ್ಷಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 25,169ಕ್ಕೆ ಇಳಿಕೆಯಾಗಿದೆ. ಒಂದೇ ದಿನ 1.18 ಲಕ್ಷ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಈವರೆಗೆ 98.59 ಲಕ್ಷ ಮಂದಿ ಕೋವಿಡ್ ಪರೀಕ್ಷೆಗೆ ಒಳಪಟ್ಟಿದ್ದಾರೆ.

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ಕಳೆದ 14 ದಿನಗಳಲ್ಲಿ 1.58 ಲಕ್ಷ ನೇರ ಸಂಪರ್ಕಿತರು ಹಾಗೂ 1.73 ಲಕ್ಷ ಪರೋಕ್ಷ ಸಂಪರ್ಕಿತರನ್ನು ಪತ್ತೆ ಮಾಡಲಾಗಿದೆ. 7 ದಿನಗಳ ಅವಧಿಯಲ್ಲಿ 32,921 ಮಂದಿಯನ್ನು ಮನೆ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ. ಬೆಂಗಳೂರಿನಲ್ಲಿ 1,048 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 3.60 ಲಕ್ಷ ದಾಟಿದೆ. ತುಮಕೂರಿನಲ್ಲಿ ಹೊಸದಾಗಿ 103 ಪ್ರಕರಣಗಳು ಪತ್ತೆಯಾಗಿವೆ. ವಿಜಯಪುರ (78), ಮೈಸೂರು (54), ದಕ್ಷಿಣ ಕನ್ನಡ (54), ಹಾಸನ (54) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ವರದಿಯಾಗಿದೆ.

| Date | 20-11-2020 |
| --- | --- |
| Page No | 2 |

# ಮರ ಕಡಿತ ಅನುಮತಿ ವಿವರ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ: ಹೈಕೋರ್ಟ್

ಬೆಂಗಳೂರು: ನಗರದಲ್ಲಿ ಯಾವುದೇ ಅಭಿವೃದ್ಧಿ ಯೋಜನೆಗಳಿಗೆ ಮರಗಳನ್ನು ಕತ್ತರಿಸಲು ಮತ್ತು ಸ್ಥಳಾಂತರಿಸಲು ನೀಡಲಾಗುವ ಅನುಮತಿ ಕುರಿತಾದ ಮಾಹಿತಿಗಳನ್ನು ಪಾಲಿಕೆಯು ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು ಎಂದು ಬಿಬಿಎಂಪಿಗೆ ಹೈಕೋರ್ಟ್ ನಿರ್ದೇಶಿಸಿದೆ. ಈ ಸಂಬಂಧ ಬೆಂಗಳೂರು ಎನ್ವಿರಾನ್‌ಮೆಂಟ್ ಟ್ರಸ್ಟ್ ಮತ್ತು ದತ್ತಾತ್ರೇಯ ಟಿ.ದೇವರೆ 2018ರಲ್ಲಿ ಸಲ್ಲಿಸಿದ್ದ ಪಿಐಎಲ್ ಅನ್ನು ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕ ಅವರ ನೇತೃತ್ವದ ವಿಭಾಗೀಯ ಪೀಠ ಈ ನಿರ್ದೇಶನ ನೀಡಿದೆ. ಮರಗಳನ್ನು ಕಡಿಯುವ ವಿಚಾರದಲ್ಲಿ ತಜ್ಞರ ಸಮಿತಿ ನೀಡಿರುವ ಶಿಫಾರಸುಗಳನ್ನು ಪಾಲಿಸಬೇಕು. ಮರಗಳನ್ನು ಕತ್ತರಿಸಲು ಅಥವಾ ಸ್ಥಳಾಂತರ ಮಾಡಲು ಅನುಮತಿ ನೀಡುವ ಪ್ರಕ್ರಿಯೆ ಪಾರದರ್ಶಕವಾಗಿರಬೇಕು. ಆ ಕುರಿತ ಎಲ್ಲ ಮಾಹಿತಿ ಸಾರ್ವಜನಿಕರಿಗೆ ಲಭ್ಯವಾಗುವ ವ್ಯವಸ್ಥೆ ಮಾಡಬೇಕು ಎಂದು ಬಿಬಿಎಂಪಿಗೆ ನ್ಯಾಯಪೀಠ ನಿರ್ದೇಶಿಸಿದೆ. ಇದೇ ವೇಳೆ ನಗರದ ಹಲವೆಡೆ ಮರಗಳನ್ನು ಕತ್ತರಿಸುವುದಕ್ಕೆ ಬಿಎಂಆರ್‌ಸಿಎಲ್‌ಗೆ ನೀಡಲಾಗಿದ್ದ ಮಧ್ಯಂತರ ತಡೆಯಾಜ್ಞೆಯನ್ನು ಪೀಠ ಮುಂದುವರಿಸಿದೆ.

ಕನ್ನಡಪ್ರಭ

| Date | 20-11-2020 |
|---|---|
| Page No | 2 |

# ಹೆಚ್ಚುವರಿ ₹1500 ಕೋಟಿ ಆಸ್ತಿ ತೆರಿಗೆ ಸಂಗ್ರಹಕ್ಕೆ ಗಡುವು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮುಂದಿನ ನಾಲ್ಕು ತಿಂಗಳಲ್ಲಿ ಹೆಚ್ಚುವರಿಯಾಗಿ 1,500 ಕೋಟಿ ರು. ಆಸ್ತಿ ತೆರಿಗೆ ಸಂಗ್ರಹಿಸುವಂತೆ ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತಾ ಕಂದಾಯ ಅಧಿಕಾರಿಗಳಿಗೆ ಗುರಿ ನೀಡಿದ್ದಾರೆ.

ಗುರುವಾರ ಬಿಬಿಎಂಪಿ ಕಂದಾಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಬಿಬಿಎಂಪಿ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಹೆಚ್ಚಿನ ಪ್ರಮಾಣ ಸಂಪನ್ಮೂಲ ಕ್ರೋಢೀಕರಣ ಮಾಡಬೇಕಾಗಿದೆ. ಈವರೆಗೆ ಸುಮಾರು 2,250 ಕೋಟಿ ರು. ಆಸ್ತಿ ತೆರಿಗೆ ಸಂಗ್ರಹಿಸಿದ್ದು, ಮುಂದಿನ ನಾಲ್ಕು ತಿಂಗಳಲ್ಲಿ ಹೆಚ್ಚುವರಿಯಾಗಿ 1,500 ಕೋಟಿ ರು. ಆಸ್ತಿ ತೆರಿಗೆ ಸಂಗ್ರಹಿಸಬೇಕು ಎಂದು ಗುರಿ ನೀಡಿದ್ದಾರೆ. ಮಾರ್ಚ್ ಅಂತ್ಯದ ವೇಳೆಗೆ ನಿಗದಿತ ಗುರಿ 3,600 ಕೋಟಿ ರು. ತಲುಪುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವಂತೆ ಸೂಚಿಸಿದ್ದಾರೆ.

ಮುಖ್ಯವಾಗಿ ವಲಯ ಹಾಗೂ ಕಂದಾಯ ಉಪ ವಿಭಾಗದ ಹಂತದಲ್ಲಿ ಅತಿ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡ ಐವರು ಸುಸ್ತಿದಾರರ ಪಟ್ಟಿ ಮಾಡಿಕೊಂಡು ನೋಟಿಸ್ ನೀಡಿ ವಸೂಲಿ ಮಾಡುವಂತೆ ಸೂಚಿಸಲಾಗಿದೆ. ಆಸ್ತಿ ವಿವರ ತಪ್ಪು ಮಾಹಿತಿ ನೀಡಿದವರ ಪತ್ತೆ ಮಾಡಿ ಸರಿಯಾಗಿ ತೆರಿಗೆ ವಸೂಲಿಗೂ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದ್ದಾರೆ.

ಇನ್ನು ಆಸ್ತಿ ತೆರಿಗೆ ವ್ಯಾಪ್ತಿಯಿಂದ ಹೊರಗೆ ಇರುವ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತಂದು ಆಸ್ತಿ ತೆರಿಗೆ ವಸೂಲಿಗೆ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ. ಸಭೆಯಲ್ಲಿ ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಬಸವರಾಜ್, ಕಂದಾಯ ವಿಭಾಗದ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕನ್ನಡಪ್ರಭ

| Date | 20-11-2020 |
| --- | --- |
| Page No | 3 |


# ದಾಸಪ್ಪ ಆಸ್ಪತ್ರೆಯಲ್ಲಿ ಲಸಿಕೆ ಸಂಗ್ರಹಕ್ಕೆ ತಯಾರಿ: ಆಯುಕ್ತ

## ಮುಂಜಾಗ್ರತಾ ಕ್ರಮವಾಗಿ ಆಸ್ಪತ್ರೆಗೆ ಸಿಸಿ ಕ್ಯಾಮರಾ ಅಳವಡಿಕೆ | ಬಿಗಿ ಭದ್ರತೆಗೆ ಕ್ರಮ

## ಪಾಲಿಕೆ ಬಳಿ 180 ಫ್ರಿಡ್ಜ್, 150 ಡೀಪ್ ಫ್ರೀಜರ್ ವ್ಯವಸ್ಥೆ: ಮಂಜುನಾಥ್ ಪ್ರಸಾದ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೇಂದ್ರ ಸರ್ಕಾರ ನೀಡಲಿರುವ ಕೋವಿಡ್ ಲಸಿಕೆಯನ್ನು ವೈಜ್ಞಾನಿಕವಾಗಿ ಸಂಗ್ರಹಿಸಿಡಲು ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ. ಪಾಲಿಕೆಯ ದಾಸಪ್ಪ ಆಸ್ಪತ್ರೆಯಲ್ಲಿ ಕೋಲ್ಡ್ ಸ್ಟೋರೇಜ್ ವ್ಯವಸ್ಥೆ ಇರುವುದರಿಂದ ಕೋವಿಡ್ ಲಸಿಕೆಯನ್ನು ಇಲ್ಲಿ ಸಂಗ್ರಹಿಸಲಾಗುತ್ತದೆ. ಅಂತೆಯೇ ಈಗಾಗಲೇ ಪಾಲಿಕೆ ಬಳಿ 180 ರೆಫ್ರಿಜರೇಟರ್ ಹಾಗೂ 150 ಡೀಪ್ ಫ್ರೀಜರ್ ವ್ಯವಸ್ಥೆ ಮಾಡಲಾಗಿದೆ. ಸಂಗ್ರಹಿಸಲಾಗುವ ಲಸಿಕೆಯನ್ನು ನಗರದ 141 ಪ್ರಾಥಮಿಕ ಆರೋಗ್ಯ ಕೇಂದ್ರ, 28 ಹೆರಿಗೆ ಆಸ್ಪತ್ರೆ, 6 ರೆಫರಲ್ ಆಸ್ಪತ್ರೆ, ಸರ್ಕಾರಿ ಆಸ್ಪತ್ರೆ, ಖಾಸಗಿ ಆಸ್ಪತ್ರೆ, ಮೆಡಿಕಲ್ ಕಾಲೇಜುಗಳಿಗೆ ವ್ಯವಸ್ಥಿತವಾಗಿ ಸಾಗಿಸಲು ಸಿದ್ಧತೆಗಳು ಮುಂದುವರೆದಿವೆ.

ಮೊದಲ ಹಂತದಲ್ಲಿ ಈ ಕೊರೋನಾ ಲಸಿಕೆಯನ್ನು 95000 ಕೊರೋನಾ ಹೋರಾಟಗಾರರಿಗೆ ನೀಡಲು ತೀರ್ಮಾನಿಸಲಾಗಿದೆ. ಈ ನಿಟ್ಟಿನಲ್ಲಿ ಕೊರೋನಾ ಹೋರಾಟಗಾರರ ವಿವರಗಳ ಪಟ್ಟಿಯನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆಯಲಾಗಿದೆ. ಅಂತೆಯೆ ಲಸಿಕೆ ಹಾಕಲು ಸಿಬ್ಬಂದಿ ಸೇರಿದಂತೆ ಸಕಲ ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ತಿಳಿಸಿದರು.

ದಾಸಪ್ಪ ಆಸ್ಪತ್ರೆಯಲ್ಲಿರುವ ಕೋಲ್ಡ್ ಸ್ಟೋರೇಜ್‌ನಲ್ಲಿ ಲಸಿಕೆ ದಾಸ್ತಾನು ಮಾಡಲಿದ್ದು, ಈ ಕೇಂದ್ರಕ್ಕೆ ಸಿಸಿ ಕ್ಯಾಮರಾ ಅಳವಡಿಕೆ ಸೇರಿದಂತೆ ಬಿಗಿ ಭದ್ರತೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

### ಪೋಲಿಯೋ ಮಾದರಿಯಲ್ಲಿ ಕೊರೋನಾ ಲಸಿಕೆ ನೀಡಿಕೆ



ಶೀಘ್ರದಲ್ಲೇ ಕೊರೋನಾ ಲಸಿಕೆ ಬಿಡುಗಡೆಯಾಗುವ ಸಾಧ್ಯತೆ ಹಿನ್ನೆಲೆಯಲ್ಲಿ ಲಸಿಕೆ ಸಂಗ್ರಹ, ಹಂಚಿಕೆ ಸೇರಿದಂತೆ ಪೋಲಿಯೋ ಲಸಿಕೆ ಮಾದರಿಯಲ್ಲಿ ಕೊರೋನಾ ಲಸಿಕೆ ಹಾಕಲು ಈಗಾಗಲೇ ಬಿಬಿಎಂಪಿ ಸಿದ್ಧತೆ ಆರಂಭಿಸಿದೆ.

• **ಮಂಜುನಾಥ ಪ್ರಸಾದ್**, ಪಾಲಿಕೆ ಆಯುಕ್ತ



ನಗರದ ದಾಸಪ್ಪ ಆಸ್ಪತ್ರೆಯಲ್ಲಿ ಕೋಲ್ಡ್ ಸ್ಟೋರೇಜ್ ವ್ಯವಸ್ಥೆಯಿರುವುದರಿಂದ ಕೋವಿಡ್ ಲಸಿಕೆ ಸಂಗ್ರಹಕ್ಕೆ ಸಿದ್ಧತೆ ನಡೆದಿದೆ.



ಕೋಲ್ಡ್ ಸ್ಟೋರೇಜ್ ಪರಿಶೀಲಿಸಿದ ಸಿಬ್ಬಂದಿ.



ಕೋಲ್ಡ್ ಸ್ಟೋರೇಜ್‌ಗಳ ಸಂಗ್ರಹ.

### ನಗರದಲ್ಲಿ 4 ದಿನಗಳ ಬಳಿಕ 1000ಕ್ಕಿಂತ ಹೆಚ್ಚು ಕೇಸ್

**ಬೆಂಗಳೂರು:** ರಾಜಧಾನಿ ಬೆಂಗಳೂರಿನಲ್ಲಿ ನಾಲ್ಕು ದಿನದ ಬಳಿಕ ಕೊರೋನಾ ಸೋಂಕಿತರ ಸಂಖ್ಯೆ ಹಾಗೂ ಸಾವಿನ ಸಂಖ್ಯೆ ತುಸು ಹೆಚ್ಚಾಗಿದೆ. ಗುರುವಾರ 1,048 ಜನರಲ್ಲಿ ಸೋಂಕು ಕಾಣಿಸಿಕೊಂಡಿದ್ದು, 14 ಜನರು ಮೃತಪಟ್ಟಿದ್ದಾರೆ. 881 ಜನರು ಗುಣಮುಖರಾಗಿದ್ದಾರೆ.

ಒಟ್ಟು ಸೋಂಕಿತರ ಸಂಖ್ಯೆ 3,60,587ಕ್ಕೆ ತಲುಪಿದ್ದರೆ, ಗುಣಮುಖರ ಸಂಖ್ಯೆ 3,38,688ಕ್ಕೆ ಏರಿಕೆಯಾಗಿದೆ. 14 ಸೋಂಕಿತರ ಸಾವಿನೊಂದಿಗೆ ಈವರೆಗೆ 4,042 ಜನರು ಮೃತಪಟ್ಟಿದ್ದಾರೆ. ನಗರದಲ್ಲಿ ಇನ್ನೂ 17,856 ಸಕ್ರಿಯ ಪ್ರಕರಣಗಳಿದ್ದು, 297 ಮಂದಿ ವಿವಿಧ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

ಕನ್ನಡಪ್ರಭ

| Date | 20-11-2020 |
| --- | --- |
| Page No | 3 |

# ಐ ಪ್ಯಾಡ್ ವಾಪಸ್ ನೀಡದ ಮಾಜಿ ಕಾರ್ಪೊರೇಟರ್‌ಗಳಿಗೆ ಪಾಲಿಕೆಯಿಂದ ಮತ್ತೆ ನೋಟಿಸ್?

## ಅಧಿಕಾರ ಮುಗಿದು ತಿಂಗಳಾದರೂ ಹಿಂದಿರುಗಿಸಿಲ್ಲ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಅಧಿಕಾರ ಅವಧಿ ಮುಗಿದರೂ ಐ-ಪ್ಯಾಡ್ ವಾಪಸ್ ನೀಡದ ಪಾಲಿಕೆಯ ಮಾಜಿ ಸದಸ್ಯರಿಗೆ ಮತ್ತೊಂದು ಬಾರಿ ನೋಟಿಸ್ ಜಾರಿ ಮಾಡಲು ಮುಂದಾಗಿದೆ.

ಬಿಬಿಎಂಪಿಯಲ್ಲಿ ಕಾಗದ ರಹಿತ ಆಡಳಿತ ಜಾರಿಗೊಳಿಸುವ ಉದ್ದೇಶದಿಂದ 2018ರಂದು 198 ಚುನಾಯಿತ ಪಾಲಿಕೆ ಸದಸ್ಯರಿಗೆ ಮತ್ತು 27 ನಾಮನಿರ್ದೇಶಿತ ಸದಸ್ಯರಿಗೆ 44 ಸಾವಿರ ರು. ಮೌಲ್ಯದ ಆಪಲ್ ಐ-ಪ್ಯಾಡ್‌ಗಳನ್ನು ವಿತರಿಸಲಾಗಿತ್ತು. ಕಳೆದ ಸೆ.10ಕ್ಕೆ ಅಧಿಕಾರ ಪೂರ್ಣಗೊಂಡ ನಂತರ ಐ-ಪ್ಯಾಡ್ ವಾಪಸ್ ಕೊಡುವಂತೆ ನೋಟಿಸ್ ಕಳುಹಿಸಲಾಗಿತ್ತು. ಅಧಿಕಾರ ಮುಗಿದು ಎರಡೂವರೆ ತಿಂಗಳು ಕಳೆದರೂ ಕೇವಲ 40 ಮಂದಿ ಐ-ಪ್ಯಾಡ್ ವಾಪಸ್ ಮಾಡಿದ್ದು, ಉಳಿದ 185 ಮಂದಿ ಐಪ್ಯಾಡ್‌ಗಳನ್ನು ತಮ್ಮ ಮಕ್ಕಳು ಹಾಗೂ ಸಂಬಂಧಿಕರಿಗೆ ನೀಡಿದ್ದು, ವಾಪಸ್ ಕೊಡಲು ಹಿಂದೇಟು ಹಾಕುತ್ತಿದ್ದಾರೆ.

ಹೀಗಾಗಿ, ಬಿಬಿಎಂಪಿ ಅಧಿಕಾರಿಗಳು ಮತ್ತೊಂದು ಬಾರಿ ಮಾಜಿ ಸದಸ್ಯರಿಗೆ ನೋಟಿಸ್ ಜಾರಿ ಮಾಡುವ ಕುರಿತು ಬಿಬಿಎಂಪಿ ಆಯುಕ್ತರ ಅನುಮತಿ ಕೋರಿದ್ದಾರೆ.



• **ಇದುವರೆಗೂ ಕೇವಲ 40 ಮಾಜಿ ಕಾರ್ಪೊರೇಟರ್‌ಗಳಿಂದ ವಾಪಸ್**

• **ಪಾಲಿಕೆಗೆ ಆರ್ಥಿಕ ಹೊರೆ**

**₹1 ಕೋಟಿ ಹೊರೆ:** ಒಟ್ಟು 225 ಐಪ್ಯಾಡ್ ಖರೀದಿಸಿ, ಪಾಲಿಕೆ ಸದಸ್ಯರಿಗೆ ನೀಡಲು ಮಾಹಿತಿ ತಂತ್ರಜ್ಞಾನ ವಿಭಾಗದಿಂದ 99 ಲಕ್ಷ ರು. ಬಳಸಲಾಗಿತ್ತು. ಸದಸ್ಯರ ಅಧಿಕಾರಾವಧಿ ಅವಧಿ ಮುಗಿದ ನಂತರ ಮುಂದೆ ಆಯ್ಕೆಯಾಗುವ ಚುನಾಯಿತ ಪ್ರತಿನಿಧಿಗಳಿಗೆ ನೀಡುವ ಉದ್ದೇಶ ಹೊಂದಲಾಗಿದೆ. ಆದರೆ, ಬಹುತೇಕರು ಐ-ಪ್ಯಾಡ್ ಮರಳಿಸದ ಕಾರಣ ಪಾಲಿಕೆಗೆ ಆರ್ಥಿಕ ಹೊರೆ ಉಂಟಾಗಿದೆ.

| Date | 20-11-2020 |
|---|---|
| Page No | 11 |

# ನಗರದಲ್ಲಿ 57 ವಿದ್ಯಾರ್ಥಿಗಳಿಗೆ ಕೊರೋನಾ

## ಕಾಲೇಜುಗಳು ಆರಂಭಗೊಂಡ 3ನೇ ದಿನ ಕೋವಿಡ್ ಶಾಕ್ | ದಿನದಿಂದ ದಿನಕ್ಕೆ ಸೋಂಕಿತರ ಸಂಖ್ಯೆ ಹೆಚ್ಚಳ

## ನಿನ್ನೆ ಸಹ ಸಾವಿರಾರು ವಿದ್ಯಾರ್ಥಿಗಳು, ಶಿಕ್ಷಕರಿಗೆ ಕೋವಿಡ್ ಪರೀಕ್ಷೆ | ಕಾಲೇಜುಗಳ ಕ್ಯಾಂಪಸ್‌ನಲ್ಲೇ ಪರೀಕ್ಷೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ನ.17ರಿಂದ ಪದವಿ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೊಮಾ ಕಾಲೇಜುಗಳು ಆರಂಭಗೊಂಡ ಬಳಿಕ ಇದುವರೆಗೂ ಒಟ್ಟಾರೆ 57 ವಿದ್ಯಾರ್ಥಿಗಳು ಮತ್ತು ಬೋಧಕರು ಹಾಗೂ ಇತರೆ ಸಿಬ್ಬಂದಿಗೆ ಕೊರೋನಾ ಸೋಂಕು ದೃಢಪಟ್ಟಿದೆ ಎಂದು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ್ ಪ್ರಸಾದ್ ತಿಳಿಸಿದ್ದಾರೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನ.17ರಂದು 360 ಕಾಲೇಜುಗಳಲ್ಲಿ 11,574 ವಿದ್ಯಾರ್ಥಿ ಹಾಗೂ ಶಿಕ್ಷಕರು, ನ.18ರಂದು 348 ಕಾಲೇಜುಗಳಲ್ಲಿ ಒಟ್ಟು 7,651 ವಿದ್ಯಾರ್ಥಿ ಮತ್ತು ಶಿಕ್ಷಕರು, ನ.19ರಂದು ಸಾವಿರಾರು ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿದೆ. ಈ ಪೈಕಿ ಬಂದಿರುವ ವರದಿಗಳ ಪೈಕಿ 57 ವಿದ್ಯಾರ್ಥಿ, ಶಿಕ್ಷಕರು, ಕಾಲೇಜು ಸಿಬ್ಬಂದಿಯಲ್ಲಿ ಸೋಂಕು ಇರುವುದು ದೃಢಪಟ್ಟಿದೆ. ಉಳಿದ ವಿದ್ಯಾರ್ಥಿಗಳ ವರದಿ ಹಂತ ಹಂತವಾಗಿ ಬರುತ್ತದೆ. ಯಾವುದೇ ಲಕ್ಷಣಗಳು ಇಲ್ಲದವರನ್ನು ಹೋಂ ಐಸೋಲೇಷನ್‌ನಲ್ಲಿರಲು ಸೂಚಿಸಿ, ನಿಗಾ ವಹಿಸಲಾಗಿದೆ. ಹೆಚ್ಚಿನ ಲಕ್ಷಣಗಳಿರುವವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಕಾಲೇಜುಗಳ ಹಾಜರಾತಿಗೆ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗೆ ಕೋವಿಡ್ ನೆಗೆಟಿವ್ ವರದಿಯನ್ನು ಸರ್ಕಾರ ಕಡ್ಡಾಯಗೊಳಿಸಿದೆ. ಆದರೆ, ಕಾಲೇಜಿಗೆ ಬರುವ ಸಾಕಷ್ಟು ಮಂದಿ ಇದುವರೆಗೂ ಕೋವಿಡ್ ಪರೀಕ್ಷೆ ನಡೆಸದೆ ಹಾಜರಾಗಲು ಪ್ರಯತ್ನಿಸಿದ್ದು ಕಂಡುಬಂತು. ಈ ಹಿನ್ನೆಲೆಯಲ್ಲಿ ಕಾಲೇಜುಗಳ ಮನವಿ ಮೇರೆಗೆ ಕ್ಯಾಂಪಸ್‌ನಲ್ಲೇ ಬಿಬಿಎಂಪಿ ಆರೋಗ್ಯ ವಿಭಾಗದಿಂದ ಕಳೆದ ಮೂರು ದಿನಗಳಿಂದ ಉಚಿತವಾಗಿ ಕೋವಿಡ್ ಪರೀಕ್ಷೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.



ನಗರದ ಕಾಲೇಜೊಂದರಲ್ಲಿ ವಿದ್ಯಾರ್ಥಿಗಳಿಗೆ ಸೋಂಕು ಪರೀಕ್ಷೆ ಮಾಡಲಾಯಿತು.



### ವಿದ್ಯಾರ್ಥಿಗಳಲ್ಲಿ ಆತಂಕ ಬೇಡ

ವಿದ್ಯಾರ್ಥಿಗಳು ಕೋವಿಡ್ ಪರೀಕ್ಷೆಗೊಳಗಾಗುವುದಕ್ಕೆ ಆತಂಕ ಪಡಬಾರದು. ಸೋಂಕು ತಗುಲಿದ್ದರೆ ಪರೀಕ್ಷೆಯಿಂದ ಪತ್ತೆಯಾಗುತ್ತದೆ. ಇದರಿಂದ ಮುನ್ನೆಚ್ಚರಿಕೆ ವಹಿಸಿ ಲಭ್ಯ ಚಿಕಿತ್ಸೆ ಮೂಲಕ ಗುಣಮುಖರಾಗಲು ಸಾಧ್ಯವಾಗುತ್ತದೆ. ಪ್ರತಿ ವಲಯದ ಕಾಲೇಜು ಕ್ಯಾಂಪಸ್‌ಗಳಲ್ಲಿ ಉಚಿತ ಕೋವಿಡ್ ಪರೀಕ್ಷೆಯನ್ನು ಬಿಬಿಎಂಪಿ ಮುಂದುವರೆಸಲಿದೆ. ಯಾರೂ ಬೇಕಾದರೂ ಬಂದು ಸ್ವಯಂ ಪ್ರೇರಿತವಾಗಿ ಪರೀಕ್ಷೆ ಮಾಡಿಸಿಕೊಳ್ಳಬಹುದು.

• **ಮಂಜುನಾಥ್ ಪ್ರಸಾದ್** ಬಿಬಿಎಂಪಿ ಆಯುಕ್ತ

# ನಿಧಾನವಾಗಿ ಕಾಲೇಜುಗಳತ್ತ ಹೆಜ್ಜೆ

## 3ನೇ ದಿನ ಹಾಜರಾತಿಯಲ್ಲಿ ಕೊಂಚ ಹೆಚ್ಚಳ | ದೂರವಾಗದ ಭೀತಿ

ಬೆಂಗಳೂರು: ಕಾಲೇಜುಗಳು ಆರಂಭವಾದ ಮೊದಲ ಎರಡು ದಿನ ಬಹಳ ನೀರಸವಾಗಿದ್ದ ವಿದ್ಯಾರ್ಥಿಗಳ ಹಾಜರಾತಿ, ಮೂರನೇ ದಿನವಾದ ಗುರುವಾರ ಕೊಂಚ ಏರಿಕೆಯಾಗಿದ್ದು ಕಂಡುಬಂತು. ಕಳೆದ ಎರಡು ದಿನಗಳಲ್ಲಿ ಕೋವಿಡ್ ಪರೀಕ್ಷೆಗೊಳಗಾಗಿ ನೆಗೆಟಿವ್ ವರದಿ ಬಂದ ಅಂತಿಮ ವರ್ಷ ವ್ಯಾಸಂಗದ ಬಹಳಷ್ಟು ವಿದ್ಯಾರ್ಥಿಗಳು ಈಗ ಕಾಲೇಜಿನತ್ತ ಮುಖ ಮಾಡಿದ್ದಾರೆ.

ಕೋವಿಡ್ ಪರೀಕ್ಷಾ ವರದಿ ಇಲ್ಲದ ಕಾರಣ ಹಾಗೂ ಪೋಷಕರಿಂದ ಲಿಖಿತ ಒಪ್ಪಿಗೆ ಪತ್ರ ತರದ ಕಾರಣ ಕಾಲೇಜುಗಳು ಸಾಕಷ್ಟು ವಿದ್ಯಾರ್ಥಿಗಳ ತರಗತಿ ಹಾಜರಾತಿಗೆ ನಿರಾಕರಿಸಿದ್ದವು. ಪರೀಕ್ಷೆ ನಡೆಸಿಕೊಂಡು ಬರಲು ಕೆಲ ಕಾಲೇಜುಗಳು ವಾಪಸ್ ಕಳುಹಿಸಿದರೆ ಮತ್ತೆ ಕೆಲವು ಕಾಲೇಜುಗಳು ಕ್ಯಾಂಪಸ್‌ನಲ್ಲೇ ಬಿಬಿಎಂಪಿ ಆರೋಗ್ಯ ವಿಭಾಗದ ಮೂಲಕ ವಿದ್ಯಾರ್ಥಿಗಳಿಗೆ ಪರೀಕ್ಷೆ ಮಾಡಿಸಲು ಕ್ರಮ ವಹಿಸಿದ್ದರು. ಇದೀಗ ಆ ವಿದ್ಯಾರ್ಥಿಗಳ ವರದಿ ಬರಲಾರಂಭಿಸಿದ್ದು, ಅವರೆಲ್ಲರೂ ಕಾಲೇಜಿಗೆ ಬರಲಾರಂಭಿಸಿದ್ದಾರೆ. ಜೊತೆಗೆ ಈಗಾಗಲೇ ಕಾಲೇಜಿಗೆ ಬರುತ್ತಿರುವ ತಮ್ಮ ಸ್ನೇಹಿತರನ್ನು ತೋರಿಸಿ ಉಳಿದ ವಿದ್ಯಾರ್ಥಿಗಳು ತಮ್ಮ ಪೋಷಕರಿಂದ ಒಪ್ಪಿಗೆ ಪತ್ರ ತಂದು ಕಾಲೇಜಿಗೆ ಹಾಜರಾಗುತ್ತಿದ್ದಾರೆ. ಇದರಿಂದ ಹಾಜರಾತಿ ಕೊಂಚ ಏರಿಕೆಯಾಗಿದೆ ಎನ್ನುತ್ತಾರೆ ವಿವಿಧ ಕಾಲೇಜುಗಳ ಪ್ರಾಂಶುಪಾಲರು ಮತ್ತು ಪ್ರಾಧ್ಯಾಪಕರು.

**ಹಾಜರಾತಿಗೆ ಅಡ್ಡಿಯಾದ ಟೆಸ್ಟ್ ವರದಿ:** ಈ ಮಧ್ಯೆ, ಕೋವಿಡ್ ಪರೀಕ್ಷಾ ವರದಿ ಬರುವುದು ಕೂಡ ಬಹಳ ತಡವಾಗುತ್ತಿದೆ. ಆ್ಯಂಟಿಜನ್ ಪರೀಕ್ಷೆಯಾಗಿದ್ದರೆ ಸ್ಥಳದಲ್ಲೇ ವರದಿ ಸಿಗುತ್ತಿತ್ತು. ಆದರೆ, ಆ ಪರೀಕ್ಷಾ ವರದಿಯ ನಿಖರತೆ (ಆ್ಯಕ್ಯುರೆಸಿ) ಆರ್‌ಟಿಪಿಸಿಆರ್ ಪರೀಕ್ಷೆಯಷ್ಟು ಸ್ಪಷ್ಟವಾಗಿರುವುದಿಲ್ಲ. ಹಾಗಾಗಿ ಸರ್ಕಾರ ಪ್ರತಿ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗೆ ಆರ್‌ಟಿಪಿಸಿಆರ್ ಪರೀಕ್ಷೆಗೆ ಸೂಚಿಸಿದೆ. ಕೆಲವೆಡೆ ಪರೀಕ್ಷೆ ನಡೆಸಿ ಮೂರು ದಿನವಾದರೂ ವಿದ್ಯಾರ್ಥಿಗಳ ವರದಿ ಬಂದಿಲ್ಲ, ವರದಿ ಬಂದರೆ ನಾವು ಕಾಲೇಜಿಗೆ ಹೋಗಲು ಸಿದ್ಧ ಎನ್ನುತ್ತಾರೆ ವಿದ್ಯಾರ್ಥಿಗಳು.

ನ.17ರಿಂದ ರಾಜ್ಯದಲ್ಲಿ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ ಕಾಲೇಜು ಆರಂಭಿಸಿದೆ. ಅಂತಿಮ ವರ್ಷದ ವ್ಯಾಸಂಗದ ವಿದ್ಯಾರ್ಥಿಗಳಿಗೆ ಮಾತ್ರ ತರಗತಿಗೆ ಅವಕಾಶ ನೀಡಲಾಗಿದೆ.

ದಿನದಿಂದ ದಿನಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕೊರೋನಾ ವರದಿ ತರುವುದೇ ವಿದ್ಯಾರ್ಥಿಗಳಿಗೆ ತಲೆನೋವಿನ ಪ್ರಶ್ನೆಯಾಗಿದೆ. ಪರೀಕ್ಷಾ ವರದಿ ಬರುವುದು ಬಹಳ ತಡವಾಗುತ್ತಿದೆ. ಸೋಮವಾರದ ವೇಳೆಗೆ ಮತ್ತಷ್ಟು ವಿದ್ಯಾರ್ಥಿಗಳು ಆಗಮಿಸುವ ನಿರೀಕ್ಷೆ ಇದೆ.

• **ಡಾ.ಪಾರ್ವತಿ** ಪ್ರಾಂಶುಪಾಲರು, ವಿಇಟಿ ಕಾಲೇಜು

VK ವಿಜಯ ಕರ್ನಾಟಕ

| Date | 20-11-2020 |
|---|---|
| Page No | 11 |

### ಬೆಸ್ಕಾಂ ಬಿಲ್ ಜತೆಗೇ ಕಸ ನಿರ್ವಹಣೆ ಶುಲ್ಕ ವಸೂಲಿಗೆ ಬಿಬಿಎಂಪಿಯಿಂದ ಸಿದ್ಧತೆ
### ಕೋವಿಡ್ ಸಂಕಷ್ಟದಲ್ಲಿರುವ ನಾಗರಿಕರ ಮೇಲೆ ಬಳಕೆದಾರರ ಶುಲ್ಕದ ಹೊರೆ

# ಗಾಯದ ಮೇಲೆ ಮತ್ತೊಂದು ಬರೆ

■ ನಾಗಪ್ಪ ನಾಗನಾಯಕನಹಳ್ಳಿ ಬೆಂಗಳೂರು
nagappa.narayanappa@timesgroup.com

ರಾಜಧಾನಿಯ ಜನರು 2021ರ ಜನವರಿಯಿಂದ ವಿದ್ಯುತ್ ಬಿಲ್ ಜತೆಗೆ ಬಿಬಿಎಂಪಿಯು ಕಸ ನಿರ್ವಹಣೆಗೆ ವಿಧಿಸುವ ಬಳಕೆದಾರರ ಶುಲ್ಕವನ್ನೂ ಪಾವತಿಸಬೇಕಿದೆ. ಪ್ರತಿಯೊಂದು ಮನೆಯಿಂದಲೂ ತಿಂಗಳಿಗೆ 200 ರೂ. ಮತ್ತು ವಾಣಿಜ್ಯ ಕಟ್ಟಡಗಳಿಂದ ಕಸ ಉತ್ಪಾದನೆ ಪ್ರಮಾಣಕ್ಕೆ ಅನುಗುಣವಾಗಿ ಶುಲ್ಕ ವಸೂಲು ಮಾಡಲು ತೀರ್ಮಾನಿಸಲಾಗಿದೆ.

ಕಸ ನಿರ್ವಹಣೆ ಉಪಕರದ(ಸೆಸ್) ಜತೆಗೆ ಬಳಕೆದಾರರ ಶುಲ್ಕ ವಿಧಿಸುತ್ತಿರುವುದು ಇದೇ ಮೊದಲು. ಈ ಮೊದಲು ಕೇವಲ ಆಸ್ತಿ ತೆರಿಗೆಯೊಂದಿಗೆ ಶೇ.5ರಷ್ಟು ಉಪಕರವನ್ನಷ್ಟೇ ಸಂಗ್ರಹಿಸಲಾಗುತ್ತಿತ್ತು. ಬಿಬಿಎಂಪಿ ರೂಪಿಸಿರುವ ಘನತ್ಯಾಜ್ಯ ನಿರ್ವಹಣೆ ಉಪನಿಯಮ-2020ರಲ್ಲಿ ಉಪಕರದೊಂದಿಗೆ ಬಳಕೆದಾರರ ಶುಲ್ಕವನ್ನೂ ಸಂಗ್ರಹಿಸಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ರಾಜ್ಯ ಸರಕಾರವೂ ಒಪ್ಪಿಗೆ ನೀಡಿದೆ.

ವಸತಿ ಮತ್ತು ವಾಣಿಜ್ಯ ಕಟ್ಟಡಗಳ ವಿಸ್ತೀರ್ಣಕ್ಕೆ ಅನುಗುಣವಾಗಿ ಸೆಸ್ ಸಂಗ್ರಹಿಸಲು ಮತ್ತು ತ್ಯಾಜ್ಯದ ಉತ್ಪಾದನೆ ಆಧರಿಸಿ ಬಳಕೆದಾರರ ಶುಲ್ಕವನ್ನು ವಸೂಲಿ ಮಾಡಲಾಗುತ್ತದೆ. ಭಾರಿ ಪ್ರಮಾಣದ ಕಸ ಉತ್ಪಾದಕರೆಂದು ಘೋಷಿಸಿಕೊಂಡವರನ್ನು ಹೊರತುಪಡಿಸಿ, ಇತರ ಎಲ್ಲ ತ್ಯಾಜ್ಯ ಉತ್ಪಾದಕರು ಪ್ರತಿ ತಿಂಗಳು ಬಳಕೆದಾರರ ಶುಲ್ಕ ಪಾವತಿಸುವುದು ಕಡ್ಡಾಯ. ಈ ಶುಲ್ಕವು ಪ್ರತಿ ವರ್ಷ ಏ.1ರಿಂದ ಸ್ವಯಂಚಾಲಿತವಾಗಿ ಶೇ.5ರ ಪ್ರಮಾಣದಲ್ಲಿ ಏರಿಕೆ ಆಗಲಿದೆ.

ಕಸ ನಿರ್ವಹಣೆಗಾಗಿ ಪಾಲಿಕೆಯು ವಾರ್ಷಿಕ ಒಂದು ಸಾವಿರ ಕೋಟಿ ರೂ. ವ್ಯಯಿಸುತ್ತಿದೆ. ಆದರೆ, ಆಸ್ತಿ ತೆರಿಗೆಯೊಂದಿಗೆ ಸಂಗ್ರಹವಾಗುತ್ತಿರುವ ಸೆಸ್‌ನಿಂದ ಬರುತ್ತಿರುವುದು ವರ್ಷಕ್ಕೆ 43 ಕೋಟಿ ರೂ. ಮಾತ್ರ. ಬಿಬಿಎಂಪಿಯು ಬೀದಿಗಳನ್ನು ಗುಡಿಸಿ ನಿರ್ವಹಣೆ ಮಾಡಲು 380 ಕೋಟಿ ರೂ. ವೆಚ್ಚ ಮಾಡುತ್ತಿದೆ. ಸಣ್ಣ-ಪುಟ್ಟ ನಗರಾಡಳಿತ ಸಂಸ್ಥೆಗಳೇ ತ್ಯಾಜ್ಯ ನಿರ್ವಹಣೆಗೆ ಬಳಕೆದಾರರ ಶುಲ್ಕವನ್ನು ವಿಧಿಸುತ್ತಿದ್ದರೂ ಪಾಲಿಕೆಯು ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳದ ಬಗ್ಗೆ ಹೈಕೋರ್ಟ್ ಪ್ರಕರಣದ ವಿಚಾರಣೆಯೊಂದರ ವೇಳೆ ಅಸಮಾಧಾನ ವ್ಯಕ್ತಪಡಿಸಿತ್ತು. ಹಾಗಾಗಿ, ಬಳಕೆದಾರರ ಶುಲ್ಕ ವಿಧಿಸುವ ಅಂಶವನ್ನೂ ಘನತ್ಯಾಜ್ಯ ನಿರ್ವಹಣೆ ನಿಯಮಗಳಲ್ಲಿ ಸೇರಿಸಲಾಗಿದೆ.

ಜ.2021ರಿಂದ ಬಳಕೆದಾರರ ಶುಲ್ಕ ವಸೂಲಿ ಸಾಧ್ಯತೆ?

ಮನೆಗಳಿಗೆ ತಿಂಗಳಿಗೆ 200 ರೂ. ಶುಲ್ಕ



## ಅನುಮತಿಗೆ ಬೆಸ್ಕಾಂ ಎಂಡಿಗೆ ಪತ್ರ

ವಿದ್ಯುತ್ ಶುಲ್ಕದೊಂದಿಗೆ ಘನತ್ಯಾಜ್ಯ ನಿರ್ವಹಣೆಯ ಬಳಕೆದಾರರ ಶುಲ್ಕವನ್ನೂ ಸಂಗ್ರಹಿಸಲು ಅನುಮತಿ ಕೋರಿ ಪಾಲಿಕೆ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರು ನ.2ರಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

''ಪಾಲಿಕೆಯಿಂದ ಬಳಕೆದಾರರ ಶುಲ್ಕ ಸಂಗ್ರಹಿಸಲು ಹೆಚ್ಚಿನ ಮಾನವ ಸಂಪನ್ಮೂಲ ಬೇಕಾಗಲಿದೆ. ಬಳಕೆದಾರರ ಶುಲ್ಕವನ್ನು ಪ್ರತಿ ತಿಂಗಳು ಕಟ್ಟುನಿಟ್ಟಾಗಿ ಸಂಗ್ರಹಿ ಸುವುದು ಅತ್ಯವಶ್ಯಕವಾಗಿರುವ ಹಿನ್ನೆಲೆಯಲ್ಲಿ ವಿದ್ಯುತ್ ಶುಲ್ಕದ ಜತೆಗೆ ಕಸ ನಿರ್ವಹಣೆಯ ಬಳಕೆದಾರರ ಶುಲ್ಕ ಸಂಗ್ರಹಿಸುವುದು ಸೂಕ್ತವಾಗಿದೆ,'' ಎಂದು ಆಯುಕ್ತರು ಪ್ರಸ್ತಾಪಿಸಿದ್ದಾರೆ.

''ತ್ಯಾಜ್ಯ ಉತ್ಪಾದಕರ ನಕ್ಷೆ ಸಿದ್ಧಪಡಿಸಲು ಕ್ರಮ ಕೈಗೊಂಡಿದ್ದು, ದತ್ತಾಂಶ ಸಂಗ್ರಹದ ವೇಳೆ ವಸತಿ ಮತ್ತು ವಾಣಿಜ್ಯ ಕಟ್ಟಡಗಳ ವಿದ್ಯುತ್ ಮೀಟರ್‌ನ ಆರ್‌ಆರ್ ಸಂಖ್ಯೆಯನ್ನೂ ಸಂಗ್ರಹಿಸಲಾಗುತ್ತಿದೆ. ತ್ಯಾಜ್ಯ ಉತ್ಪಾದಕರ ಮ್ಯಾಪಿಂಗ್ ಆ್ಯಪ್ ಅನ್ನು ಬೆಸ್ಕಾಂನ ತಂತ್ರಾಂಶದೊಂದಿಗೆ ವಿಲೀನಗೊಳಿಸಲಾಗುವುದು. ಸಂಗ್ರಹವಾಗುವ ಬಳಕೆದಾರರ ಶುಲ್ಕದಲ್ಲಿ ಸೇವಾ ಶುಲ್ಕ ಪಾವತಿಸಲಾಗುವುದು. ಬಳಕೆದಾರರ ಶುಲ್ಕವನ್ನು ವಸತಿ, ವಾಣಿಜ್ಯ ಕಟ್ಟಡಗಳ ವಿದ್ಯುತ್ ಮೀಟರ್‌ನ ಆರ್‌ಆರ್ ಸಂಖ್ಯೆ ಬಳಸಿ ಬೆಸ್ಕಾಂ ತಂತ್ರಾಂಶದ ಆ್ಯಪ್ ಮೂಲಕವೇ ವಸೂಲು ಮಾಡಬೇಕು,'' ಎಂದು ಮನವಿ ಮಾಡಿಕೊಂಡಿದ್ದಾರೆ. ಇದು ಚರ್ಚೆಯ ಹಂತದಲ್ಲಿಯೇ ಇದ್ದು ಅಂತಿಮಗೊಂಡಿಲ್ಲ.

**ಬಳಕೆದಾರರ ಶುಲ್ಕದ ವಿವರ**

| ತ್ಯಾಜ್ಯ ಉತ್ಪಾದಕರು | ಶುಲ್ಕ (ರೂ.ಗಳಲ್ಲಿ) |
|---|---|
| ಮನೆಗಳು | 200 |

**ವಾಣಿಜ್ಯ ಸಂಸ್ಥೆಗಳು**

| ಕಸ ಉತ್ಪಾದನೆ ಪ್ರಮಾಣ | ಶುಲ್ಕ (ರೂ. ಗಳಲ್ಲಿ) |
|---|---|
| ನಿತ್ಯ 5 ಕೆ.ಜಿ ಅಥವಾ ಅದಕ್ಕಿಂತ ಕಡಿಮೆ | 500 |
| ನಿತ್ಯ 5 ಕೆ.ಜಿ ಗಿಂತ ಹೆಚ್ಚು ಅಥವಾ 10 ಕೆ.ಜಿ ಗಿಂತ ಕಡಿಮೆ | 1400 |
| ನಿತ್ಯ 10 ಕೆ.ಜಿ ಗಿಂತ ಹೆಚ್ಚು ಅಥವಾ 25 ಕೆ.ಜಿ ಗಿಂತ ಕಡಿಮೆ | 3500 |
| ನಿತ್ಯ 25 ಕೆ.ಜಿ ಗಿಂತ ಹೆಚ್ಚು ಅಥವಾ 50 ಕೆ.ಜಿ ಗಿಂತ ಕಡಿಮೆ | 7000 |
| ನಿತ್ಯ 50 ಕೆ.ಜಿ ಗಿಂತ ಹೆಚ್ಚು ಅಥವಾ 100 ಕೆ.ಜಿ ಗಿಂತ ಕಡಿಮೆ | 14000 |

**ಆಸ್ತಿ ತೆರಿಗೆಯೊಂದಿಗೆ ಸಂಗ್ರಹಿಸುತ್ತಿರುವ ಕರ**

| ವಾಸದ ಕಟ್ಟಡಗಳು (ಚ. ಅಡಿಗಳಲ್ಲಿ) | ಕರ (ರೂ. ಗಳಲ್ಲಿ) |
|---|---|
| 1000 | 10 |
| 1001ರಿಂದ 3000 | 30 |
| 3000 ಮೇಲ್ಪಟ್ಟು | 50 |
| **ವಾಣಿಜ್ಯ ಕಟ್ಟಡಗಳು** | |
| 1000 | 50 |
| 1001ರಿಂದ 5000 | 100 |
| 5000 ಮೇಲ್ಪಟ್ಟು | 200 |
| **ಕೈಗಾರಿಕಾ ಕಟ್ಟಡಗಳು** | |
| 1000 | 100 |
| 1001ರಿಂದ 5000 | 200 |
| 5000 ಮೇಲ್ಪಟ್ಟು | 300 |
| **ಹೋಟೆಲ್, ಕಲ್ಯಾಣ ಮಂಟಪ, ಆರೋಗ್ಯ ಸೇವಾ ಸಂಸ್ಥೆಗಳು** | |
| 10000 | 300 |
| 10001ರಿಂದ 50000 | 500 |
| 50000 ಮೇಲ್ಪಟ್ಟು | 600 |

## ಕೋಟ್ಯಂತರ ರೂ ಆದಾಯ ನಿರೀಕ್ಷೆ

ನಗರದಲ್ಲಿ ಅಂದಾಜು 28 ಲಕ್ಷ ಕಟ್ಟಡಗಳಿದ್ದು, ಬಳಕೆದಾರರ ಶುಲ್ಕದಿಂದ ಮಾಸಿಕ ಕೋಟ್ಯಂತರ ರೂ. ಆದಾಯ ನಿರೀಕ್ಷಿಸಲಾಗಿದೆ. ಕೊರೊನಾ ಸೋಂಕು ತಂದೊಡ್ಡಿರುವ ಸಂಕಷ್ಟದಿಂದ ತತ್ತರಿಸಿ ಹೋಗಿರುವ ಜನರಿಗೆ ರಾಜ್ಯ ಸರಕಾರ ಮತ್ತು ಬಿಬಿಎಂಪಿಯು ಬಳಕೆದಾರರ ಶುಲ್ಕದ ಬರೆ ಹಾಕಲು ತಯಾರಿ ಮಾಡಿಕೊಂಡಿವೆ. ಪೌರ ಕಾರ್ಮಿಕರು ನಿತ್ಯ ಮನೆಗಳಿಂದ ಕಸ ಸಂಗ್ರಹಿಸಬೇಕಾದರೆ ತಿಂಗಳಿಗೆ 200 ರೂ. ಶುಲ್ಕವನ್ನು ಕಟ್ಟಲೇಬೇಕಿದೆ.

ನಿಗದಿತ ಅವಧಿಯೊಳಗೆ ಶುಲ್ಕ ಪಾವತಿ ಮಾಡದಿದ್ದರೆ ತಿಂಗಳಿಗೆ ಶೇ.2ರಷ್ಟು ಬಡ್ಡಿ ಸೇರಿಸಿ ವಸೂಲು ಮಾಡಲಾಗುತ್ತದೆ. ಇಲ್ಲವೇ ಕಸ ಪಡೆಯುವುದನ್ನು ನಿಲ್ಲಿಸಲಾಗುತ್ತದೆ. ಸ್ಥಳದಲ್ಲೇ ಸಾವಯವ ಗೊಬ್ಬರ ತಯಾರಿಸುವ ಉತ್ಪಾದಕರಿಗೆ ಮತ್ತು ಬಯೋಮಿಥನೈಸೇಷನ್ ಮಾಡುವವರಿಗೆ ಬಳಕೆದಾರರ ಶುಲ್ಕದಲ್ಲಿ ಶೇ.50ರಷ್ಟು ರಿಯಾಯಿತಿ ಸಿಗಲಿದೆ.

ವಿಜಯ ಕರ್ನಾಟಕ

| Date | 20-11-2020 |
| --- | --- |
| Page No | 11 |

# 1048 ಸೋಂಕಿತರು

**ವಿಕ ಸುದ್ದಿಲೋಕ** ಬೆಂಗಳೂರು

ನಗರದಲ್ಲಿ ಕೊರೊನಾ ಸೋಂಕು ಪ್ರಕರಣಗಳ ಸಂಖ್ಯೆಯಲ್ಲಿ ಇಳಿಮುಖವಾಗುತ್ತಿದ್ದು, ಗುರುವಾರ ಹೊಸದಾಗಿ 1048 ಮಂದಿಗೆ ಸೋಂಕು ತಗಲಿರುವುದು ದೃಢಪಟ್ಟಿದೆ. ಕೊರೊನಾ ದಿಂದ ಬಳಲುತ್ತಿದ್ದ 14 ಮಂದಿ ಮೃತಪಟ್ಟಿದ್ದಾರೆ.

17,856 ರೋಗಿಗಳು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, 297 ಮಂದಿಯ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಕೋವಿಡ್ ಬಾಧಿತರ ಪೈಕಿ ಈವರೆಗೆ 4042 ಮಂದಿ ಸಾವಿಗೀಡಾಗಿದ್ದಾರೆ.

ವಿಜಯ ಕರ್ನಾಟಕ

| Date | 20-11-2020 |
|---|---|
| Page No | 11 |

# 57 ವಿದ್ಯಾರ್ಥಿಗಳಿಗೆ ಕೊರೊನಾ ಸೋಂಕು

**ವಿಕ ಸುದ್ದಿಲೋಕ ಬೆಂಗಳೂರು**

ಅಂತಿಮ ವರ್ಷದ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ 57 ವಿದ್ಯಾರ್ಥಿಗಳಿಗೆ ಕೊರೊನಾ ಸೋಂಕು ತಗಲಿರುವುದು ದೃಢಪಟ್ಟಿದೆ. ಇದು ವಿದ್ಯಾರ್ಥಿ ಸಮುದಾಯದಲ್ಲಿ ಆತಂಕ ಹೆಚ್ಚಿಸಿದೆ.

ಅಂತಿಮ ವರ್ಷದ ಪದವಿ ಕಾಲೇಜು ಗಳ ಶಿಕ್ಷಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಕೋವಿಡ್ ಪರೀಕ್ಷೆಯನ್ನು ಕಡ್ಡಾಯ ಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಬಿಬಿಎಂಪಿಯು ವಿದ್ಯಾರ್ಥಿಗಳನ್ನು ಕೋವಿಡ್ ಪರೀಕ್ಷೆಗೊಳಪಡಿಸುವ ಸಲುವಾಗಿಯೇ ಮೊಬೈಲ್ ತಂಡಗಳನ್ನು ನಿಯೋಜಿಸಿದೆ.

**ಈವರೆಗೆ 30,032 ವಿದ್ಯಾರ್ಥಿಗಳಿಗೆ ಪರೀಕ್ಷೆ**

**ಮೊಬೈಲ್ ತಂಡದಿಂದ ಕೋವಿಡ್ ಪರೀಕ್ಷೆ**

ಪಾಲಿಕೆಯಿಂದ ನಿಯೋಜಿಸಲ್ಪಟ್ಟ ಮೊಬೈಲ್ ತಂಡಗಳು ಕಾಲೇಜುಗಳ ಬಳಿಯೇ ತೆರಳಿ ವಿದ್ಯಾರ್ಥಿಗಳಿಗೆ ಕೋವಿಡ್ ಪತ್ತೆ ಪರೀಕ್ಷೆ ಮಾಡುತ್ತಿವೆ. ನಗರದ 343 ಕಾಲೇಜುಗಳಲ್ಲಿ ಅಂತಿಮ ವರ್ಷದ ಪದವಿ ವ್ಯಾಸಂಗ ಮಾಡುತ್ತಿರುವ 81911 ವಿದ್ಯಾರ್ಥಿಗಳನ್ನು ಗುರುತಿಸಿದ್ದು, ಈವರೆಗೆ 30,032 ಮಂದಿಗೆ ಪರೀಕ್ಷೆ ಮಾಡಲಾಗಿದೆ.

ಈ ಪೈಕಿ 57 ಮಂದಿಯಲ್ಲಿ ಸೋಂಕು ಪತ್ತೆಯಾಗಿದೆ. ನಗರದ ನಾನಾ ಕಾಲೇಜುಗಳ ಬಳಿ ಪಾಲಿಕೆಯ 176 ಮೊಬೈಲ್ ತಂಡಗಳು ಗುರುವಾರ 10,807 ವಿದ್ಯಾರ್ಥಿಗಳನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಿವೆ. ನ. 17ರಂದು 11574 ಮತ್ತು ನ. 18ರಂದು 7651 ವಿದ್ಯಾರ್ಥಿಗಳಿಗೆ ಪರೀಕ್ಷೆ ಮಾಡಲಾಗಿದೆ.

VK ವಿಜಯ ಕರ್ನಾಟಕ

| Date | 20-11-2020 |
| --- | --- |
| Page No | 12 |


### ಖಾಸಗಿ ವ್ಯಕ್ತಿಗಳು, ಸಂಸ್ಥೆಗಳಿಂದ ಒತ್ತುವರಿ | ಅಕ್ರಮ ಕಟ್ಟಡ ನಿರ್ಮಾಣ

# ಸುಬ್ಬರಾಯನ ಕೆರೆ ಸಂಪೂರ್ಣ ಕಲುಷಿತ

**ಬೆಂಗಳೂರು ದಕ್ಷಿಣ:** ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರದ ಗೊಟ್ಟಿಗೆರೆ ವಾರ್ಡ್‌ನ ಜಂಬೂಸವಾರಿ ದಿಣ್ಣೆಯ ಸುಬ್ಬರಾಯನ ಕೆರೆ ಅಳಿವಿನಂಚಿನಲ್ಲಿದೆ.

### ಕೆರೆ ಸ್ವಚ್ಛತೆಗೆ ಅಧಿಕಾರಿಗಳ ನಿರ್ಲಕ್ಷ್ಯ

ಸುತ್ತಮುತ್ತಲಿನ ಬಡಾವಣೆಗಳ ತ್ಯಾಜ್ಯ ನೀರನ್ನು ಕೆರೆಗೆ ಬಿಡಲಾಗುತ್ತಿದೆ. ಅಲ್ಲದೆ ಕೆರೆಯಲ್ಲಿ ಸಂಪೂರ್ಣವಾಗಿ ಜೊಂಡು ಬೆಳೆದು ನೀರು ಕಾಣದಂತಾಗಿದೆ. ಮುಖ್ಯವಾಗಿ ಕೆರೆಯ ಜಾಗವನ್ನು ಕೆಲವರು ಒತ್ತುವರಿ ಮಾಡಿಕೊಂಡು ದೊಡ್ಡ ಕಟ್ಟಡಗಳನ್ನು ಕಟ್ಟಿದ್ದಾರೆ. ಆದರೆ ಕೆರೆಯ ಅಭಿವೃದ್ಧಿಗೆ ಜನಪ್ರತಿನಿಧಿಗಳು, ಅಧಿಕಾರಿಗಳು ಮುಂದಾಗದಿರುವುದು ನಾಗರಿಕರ ಆಕ್ರೋಶಕ್ಕೆ ಕಾರಣವಾಗಿದೆ.



ಜೊಂಡು ತುಂಬಿರುವ ಸುಬ್ಬರಾಯನ ಕರೆ

"3 ಎಕರೆಗೂ ಹೆಚ್ಚು ವಿಸ್ತೀರ್ಣವಿದ್ದ ಕೆರೆ, ಈಗ ಒಂದು ಎಕರೆಗಿಂತ ಕಡಿಮೆಯಿದೆ. ಕೆರೆಯ ಜಾಗವನ್ನು ಕೆಲವರು ಒತ್ತುವರಿ ಮಾಡಿಕೊಂಡು ಕಟ್ಟಡ ಕಟ್ಟಿಕೊಂಡಿದ್ದಾರೆ. ಭಾಗ್ಯನಗರ, ಸೌತ್ ಅವೆನ್ಯೂ ಬಡಾವಣೆ ಹಾಗೂ ಕೆರೆಯ ಪಕ್ಕದಲ್ಲಿರುವ ಮನೆಗಳ ತ್ಯಾಜ್ಯ ನೀರನ್ನು ಕೆರೆಗೆ ಬಿಡಲಾಗುತ್ತಿದೆ. ಒತ್ತುವರಿ ತೆರವುಗೊಳಿಸಿ, ಕೆರೆಯ ಸ್ವಚ್ಛತೆಗೆ ಜನಪ್ರತಿನಿಧಿಗಳು, ಅಧಿಕಾರಿಗಳು ಮುಂದಾಗಬೇಕು," ಎಂದು ಸ್ಥಳೀಯ ಬಿಜೆಪಿ ಮುಖಂಡ ವೈಕುಂಠ ವಾಸುದೇವ್ ರೆಡ್ಡಿ ಒತ್ತಾಯಿಸಿದರು.



ಕೆರೆ ಪ್ರದೇಶದಲ್ಲಿ ಕಸದ ರಾಶಿ.

"ಕಳೆದ ಹತ್ತು ವರ್ಷಗಳಿಂದ ಕೆರೆ ಕಲುಷಿತವಾಗಿದೆ. ತ್ಯಾಜ್ಯ ನೀರು ಕೆರೆಗೆ ಸೇರುತ್ತಿದ್ದರೂ, ಅದನ್ನು ನೋಡಿಕೊಂಡು ಅಧಿಕಾರಿಗಳು ಮೌನ ವಹಿಸಿದ್ದಾರೆ. ಕೆರೆಯ ಜಾಗವನ್ನು ಒತ್ತುವರಿ ಮಾಡಿಕೊಂಡರೂ ಪ್ರಶ್ನಿಸುವವರೇ ಇಲ್ಲವಾಗಿದೆ. ಕೆರೆಯಿಂದ ಕೆಟ್ಟ ವಾಸನೆ ಬರುತ್ತಿದೆ. ಇದರಿಂದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಒತ್ತುವರಿ ತೆರವು ಮತ್ತು ಕೆರೆ ಸ್ವಚ್ಛತೆ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಬೇಕು," ಎಂದು ಗೊಟ್ಟಿಗೆರೆ ವಾರ್ಡ್ ಎಸ್‌ಸಿ/ಎಸ್‌ಟಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುನಿರಾಜು ಆಗ್ರಹಿಸಿದರು.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 20-11-2020 |
|---|---|
| Page No | II |


# ಕಾಲೇಜಿಗೆ ಹಾಜರಾತಿ ಶೇ.5 ಮಾತ್ರ ಹೆಚ್ಚಳ

**ಬೆಂಗಳೂರು:** ಲಾಕ್‌ಡೌನ್ ಬಳಿಕ ಕಾಲೇಜು ಪುನರಾರಂಭವಾದ 3ನೇ ದಿನವೂ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಿನ ಬದಲಾವಣೆಯಾಗಿಲ್ಲ. ಕೇವಲ ಶೇ.5 ಮಾತ್ರ ಏರಿಕೆ ಕಂಡಿದೆ. ಕರೊನಾ ಪರೀಕ್ಷೆ ಮಾಡಿಸಿ ನೆಗೆಟಿವ್ ವರದಿ ಪಡೆದುಕೊಂಡೇ ಕಾಲೇಜಿಗೆ ಬರುವುದಕ್ಕೆ ಸರ್ಕಾರ ಸೂಚನೆ ನೀಡಿರುವುದರಿಂದ, ವರದಿಗಾಗಿ ಕಾಯುವ ಸ್ಥಿತಿ ಬಂದೊದಗಿದೆ.

ಆರೋಗ್ಯ ಕೇಂದ್ರಗಳಲ್ಲಿ ಪರೀಕ್ಷೆಗೆ ಒಳಪಡುವ ವಿದ್ಯಾರ್ಥಿಗಳಿಗೆ ನೆಗೆಟಿವ್ ವರದಿ ಬಂದರೆ, ಅಧಿಕೃತವಾಗಿ ಸಹಿ ಹಾಕಿ ವರದಿ ನೀಡುತ್ತಿಲ್ಲ. ನೆಗೆಟಿವ್ ವರದಿ ಬಂದಿದ್ದರೂ ಅದನ್ನು ಕಾಲೇಜು ಆಡಳಿತ ಮಂಡಳಿ ಪುಷ್ಟೀಕರಿಸುತ್ತಿಲ್ಲ. ಹೀಗಾಗಿ ವಿದ್ಯಾರ್ಥಿಗಳು ಆರ್‌ಟಿಪಿಸಿಆರ್ ಮಾಡಿಸಬೇಕಾಗಿದೆ. ಈ ವರದಿಗಾಗಿ ಕನಿಷ್ಠ ಒಂದು ವಾರ ಕಾಯಬೇಕಾಗಿದೆ. ಅಲ್ಲಿಯವರೆಗೂ ವಿದ್ಯಾರ್ಥಿಗಳು ಕಾಲೇಜಿಗೆ ಹೋಗಲಾಗುವುದಿಲ್ಲ.

» **ಕರೊನಾ ವರದಿ ನಿರೀಕ್ಷೆಯಲ್ಲಿ ವಿದ್ಯಾರ್ಥಿಗಳು**

**ಪಾಸಿಟಿವ್ ಕೂಡ ಇದೆ:** ಬಹುತೇಕ ಕಾಲೇಜುಗಳಲ್ಲಿ ಆವರಣದ ಮುಂದೆಯೇ ಬಿಬಿಎಂಪಿ ಕೋವಿಡ್ ಪರೀಕ್ಷಾ ಕೇಂದ್ರಗಳನ್ನು ತೆರೆದಿದೆ. ಇದರಿಂದ ವಿದ್ಯಾರ್ಥಿಗಳನ್ನು ಅಲ್ಲೇ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. 600 ವಿದ್ಯಾರ್ಥಿಗಳಲ್ಲಿ ಐವರಿಗೆ ರ‍್ಯಾಪಿಡ್ ಆ್ಯಂಟಿಜನ್ ಟೆಸ್ಟ್‌ನಲ್ಲಿ ಪಾಸಿಟಿವ್ ವರದಿ ಬಂದಿದ್ದು, ಆನಂತರ ಆರ್‌ಟಿಪಿಸಿಆರ್‌ಗೆ ಒಳಪಡಿಸಲಾಗಿದೆ. ಒಬ್ಬನಿಗೆ ಕರೊನಾ ದೃಢಪಟ್ಟಿದ್ದು, ಉಳಿದವರು ವರದಿಗಾಗಿ ಕಾಯುತ್ತಿದ್ದಾರೆ. ಆದರೆ, ಪಾಸಿಟಿವ್ ಪ್ರಮಾಣ ಕಡಿಮೆ ಇದೆ ಎಂದು ಪ್ರಾಂಶುಪಾಲರೊಬ್ಬರು ತಿಳಿಸಿದ್ದಾರೆ.

## 57 ಮಂದಿಗೆ ಕರೊನಾ ದೃಢ

**ನಗರದ ಕಾಲೇಜುಗಳಲ್ಲಿ 2 ದಿನಗಳಲ್ಲಿ 18 ಸಾವಿರ ಮಂದಿಗೆ ಕೋವಿಡ್ ಪರೀಕ್ಷೆ ಮಾಡಲಾಗಿದ್ದು, ಕಾಲೇಜು ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಸೇರಿ 57 ಮಂದಿಗೆ ಸೋಂಕು ದೃಢಪಟ್ಟಿದೆ. ಗುರುವಾರ 10,807 ಜನರನ್ನು ಆರ್‌ಟಿ-ಪಿಸಿಆರ್ ಪರೀಕ್ಷೆ ಮಾಡಲಾಗಿದ್ದು, ಶನಿವಾರ ವರದಿ ತಿಳಿಯಲಿದೆ ಎಂದು ಬಿಬಿಎಂಪಿ ಆಯುಕ್ತ ಮಂಜುನಾಥಪ್ರಸಾದ್ ತಿಳಿಸಿದ್ದಾರೆ.**

ವಿಜಯವಾಣಿ
ಕನ್ನಡಿಗರ ಧ್ವನಿ

| Date | 20-11-2020 |
| --- | --- |
| Page No | 2 |

# ಐಪಾಡ್ ಮರಳಿಸದ 184 ಮಾಜಿ ಕೌನ್ಸಿಲರ್‌ಗಳು

**ಬೆಂಗಳೂರು:** ಆ್ಯಪಲ್ ಐಪಾಡ್ ಮರಳಿಸುವಂತೆ ನೀಡಿದ್ದ ನೋಟಿಸ್‌ಗೆ ಸ್ಪಂದಿಸದ ಪಾಲಿಕೆಯ ಮಾಜಿ ಸದಸ್ಯರಿಗೆ ಮತ್ತೊಂದು ನೋಟಿಸ್ ಜಾರಿಗೊಳಿಸಲು ಬಿಬಿಎಂಪಿ ಮುಂದಾಗಿದೆ.

» **2ನೇ ಬಾರಿ ನೋಟಿಸ್ ನೀಡಲು ಮುಂದಾದ ಪಾಲಿಕೆ**

ಕಾಗದರಹಿತ ಆಡಳಿತ ಜಾರಿ ಉದ್ದೇಶದಿಂದ 2018ರ ಮಾ.3 ರಂದು 197 ಚುನಾಯಿತ ಸದಸ್ಯರು ಮತ್ತು 27 ನಾಮನಿರ್ದೇಶಿತ ಸದಸ್ಯರಿಗೆ ತಲಾ 44 ಸಾವಿರ ರೂ. ಮೌಲ್ಯದ ಆ್ಯಪಲ್ ಐ-ಪಾಡ್ ವಿತರಿಸಲಾಗಿತ್ತು. ಸೆ.10ಕ್ಕೆ ಅಧಿಕಾರ ಪೂರ್ಣಗೊಂಡ ಕೆಲವೇ ದಿನಗಳ ಬಳಿಕ ಐಪಾಡ್ ಮರಳಿಸುವಂತೆ ನೋಟಿಸ್ ಕಳುಹಿಸಲಾಗಿತ್ತು. ಅಧಿಕಾರ ಮುಗಿದು ಎರಡೂವರೆ ತಿಂಗಳು ಕಳೆದರೂ 40 ಮಂದಿ ಮಾತ್ರ ಐ-ಪ್ಯಾಡ್ ವಾಪಸ್ ಮಾಡಿದ್ದಾರೆ. ಉಳಿದ 157 ಚುನಾಯಿತ ಸದಸ್ಯರು ಮತ್ತು ನಾಮನಿರ್ದೇಶಿತ ಸದಸ್ಯರು ಸೇರಿ 184 ಮಂದಿ ಐಪಾಡ್ ಹಿಂದಿರುಗಿಸಿಲ್ಲ.

**1 ಕೋಟಿ ರೂ. ಹೊರೆ:** ಒಟ್ಟು 225 ಐಪಾಡ್ ಖರೀದಿಸಲು ಮಾಹಿತಿ ತಂತ್ರಜ್ಞಾನ ವಿಭಾಗದಿಂದ 99 ಲಕ್ಷ ರೂ. ವೆಚ್ಚ ಮಾಡಲಾಗಿದೆ. ಈ ಐಪಾಡ್‌ಗಳನ್ನು ಮುಂದೆ ಆಯ್ಕೆಯಾಗುವ ಚುನಾಯಿತ ಪ್ರತಿನಿಧಿಗಳಿಗೆ ನೀಡಲಾಗುತ್ತದೆ.

**40 ಮಂದಿ ಮಾತ್ರ ಐ ಪಾಡ್ ವಾಪಸ್ ಕೊಟ್ಟಿದ್ದಾರೆ. ಉಳಿದ ಸದಸ್ಯರಿಂದ ವಾಪಸ್ ಪಡೆಯಲು ಮತ್ತೊಮ್ಮೆ ನೋಟಿಸ್ ಕಳುಹಿಸುವ ಕುರಿತು ಆಯುಕ್ತರಿಂದ ಅನುಮತಿ ಕೇಳಲಾಗಿದೆ.**

| **ಜೆ. ಹೇಮಂತ್** ಬಿಬಿಎಂಪಿ ಕೌನ್ಸಿಲ್ ಕಾರ್ಯದರ್ಶಿ

ವಿಜಯವಾಣಿ
ಕನ್ನಡಿಗರ ಧ್ವನಿ

| Date | 20-11-2020 |
|---|---|
| Page No | 2A |

# ₹1,500 ಕೋಟಿ ಆಸ್ತಿ ತೆರಿಗೆ ವಸೂಲಿ ಗುರಿ

**ಬೆಂಗಳೂರು:** 2020-21ನೇ ಸಾಲಿನ ಆರ್ಥಿಕ ವರ್ಷ ಮುಕ್ತಾಯವಾಗುವ ಅವಧಿಯೊಳಗೆ 1,500 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹಿಸುವಂತೆ ಕಂದಾಯ ಅಧಿಕಾರಿಗಳಿಗೆ ಬಿಬಿಎಂಪಿ ಆಡಳಿತಾಧಿಕಾರಿ ಗೌರವ್‌ಗುಪ್ತ ಗುರಿ ನೀಡಿದ್ದಾರೆ. ಕಂದಾಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಪಾಲಿಕೆ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ಹೆಚ್ಚು ಸಂಪನ್ಮೂಲ ಕ್ರೋಢೀಕರಣ ಮಾಡಬೇಕಿದೆ. ಪ್ರಸ್ತುತ ವರ್ಷದ 3,500 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹ ಗುರಿಯಲ್ಲಿ 2,250 ಕೋಟಿ ರೂ. ಸಂಗ್ರಹ ಮಾಡಲಾಗಿದೆ. ನಿಗದಿತ ಗುರಿಗಿಂತ ಹೆಚ್ಚು ಆಸ್ತಿ ತೆರಿಗೆ ಸಂಗ್ರಹ ಮಾಡಬೇಕಿದೆ. ಹೀಗಾಗಿ, ಮುಂದಿನ 4 ತಿಂಗಳಲ್ಲಿ 1,500 ಕೋಟಿ ರೂ. ತೆರಿಗೆ ಸಂಗ್ರಹಿಸಬೇಕು ಎಂದು ಸೂಚಿಸಿದ್ದಾರೆ.

» **ನಾಲ್ಕು ತಿಂಗಳಲ್ಲಿ 1,500 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹಿಸಿ**

**5 ಸುಸ್ತಿದಾರರಿಗೆ ನೋಟಿಸ್:** ಕಂದಾಯ ಸಂಗ್ರಹಣೆಗೆ ಮುಖ್ಯವಾಗಿ ವಲಯ ಹಾಗೂ ಕಂದಾಯ ಉಪ ವಿಭಾಗದದ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡ 5 ಸುಸ್ತಿದಾರರಿಗೆ ನೋಟಿಸ್ ಜಾರಿಗೊಳಿಸಿ ತೆರಿಗೆ ಸಂಗ್ರಹಿಸಲು ಕ್ರಮ ವಹಿಸಬೇಕು. ಆಸ್ತಿಗಳ ವಿವರದ ಬಗ್ಗೆ ತಪ್ಪು ಮಾಹಿತಿ ನೀಡಿದವರ ಪತ್ತೆಹಚ್ಚಿ ಕ್ರಮ ವಹಿಸಬೇಕು. ಆಸ್ತಿ ತೆರಿಗೆಯಿಂದ ಹೊರಗುಳಿದ ಎಲ್ಲ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತಂದು ವಸೂಲಿ ಮಾಡುವಂತೆ ನಿರ್ದೇಶಿಸಿದ್ದಾರೆ. ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಬಸವರಾಜ್, 8 ವಲಯಗಳ ಕಂದಾಯ ವಿಭಾಗದ ಅಧಿಕಾರಿಗಳು ಸಭೆಯಲ್ಲಿದ್ದರು.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 20-11-2020 |
|---|---|
| Page No | 2A |



ವಿಜಯವಾಣಿ
ಕನ್ನಡಿಗರ ಧ್ವನಿ

| Date | 20-11-2020 |
| --- | --- |
| Page No | 3 |

### ದಾಸಪ್ಪ ಆಸ್ಪತ್ರೆಯಲ್ಲಿ ಕೋಲ್ಡ್ ಸ್ಟೋರೇಜ್ ವ್ಯವಸ್ಥೆ | ಬಿಬಿಎಂಪಿಯಿಂದ ಬಿಗಿಭದ್ರತೆ

# ಪೋಲಿಯೊ ಮಾದರಿ ಕೋವಿಡ್ ಲಸಿಕೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕರೊನಾ ಸೋಂಕಿಗೆ ಕೇಂದ್ರ ಸರ್ಕಾರ ನೀಡುವ ಲಸಿಕೆಯನ್ನು ಪಲ್ಸ್ ಪೋಲಿಯೊ ಕಾರ್ಯಕ್ರಮದ ಮಾದರಿಯಲ್ಲಿ ಸಾರ್ವಜನಿಕರಿಗೆ ತಲುಪಿಸಲು ಬಿಬಿಎಂಪಿ ಯೋಜನೆ ರೂಪಿಸಿದೆ.

ನಗರದಲ್ಲಿ ಮೊದಲ ಹಂತದಲ್ಲಿ 95 ಸಾವಿರ ಕರೊನಾ ವಾರಿಯರ್ಸ್‌ಗೆ ಲಸಿಕೆ ನೀಡಲು ತೀರ್ಮಾನಿಸಿದ್ದು, ಕರೊನಾ ವಾರಿಯರ್ಸ್ ವಿವರವನ್ನುಸಂಬಂಧಿತಇಲಾಖೆಯಿಂದ ಪಡೆಯಲಾಗಿದೆ. ಪಲ್ಸ್ ಪೋಲಿಯೊ ಕಾರ್ಯಕ್ರಮದ ಮಾದರಿಯಲ್ಲಿ ವ್ಯಾಕ್ಸಿನ್ ಹಾಕುವುದಕ್ಕೆ ಸಿಬ್ಬಂದಿ ಸೇರಿ, ಬಾಕ್ಸ್‌ಗಳು ಹಾಗೂ ಸೂಕ್ತ ಅವಧಿಗೆ ಲಸಿಕೆ ಹಾಕುವ ಕೇಂದ್ರಗಳನ್ನು ತಲುಪಲು ವಾಹನ ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ ಎಂದು ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ತಿಳಿಸಿದ್ದಾರೆ.

**» ಕರೊನಾ ಯೋಧರ ಪಟ್ಟಿ ಪಡೆದ ಬಿಬಿಎಂಪಿ**

**ದಾಸಪ್ಪ ಆಸ್ಪತ್ರೆಯಲ್ಲಿ ಸಂಗ್ರಹ:** ಟೌನ್‌ಹಾಲ್ ಸಮೀಪದ ದಾಸಪ್ಪ ಆಸ್ಪತ್ರೆಯಲ್ಲಿ ಕೋವಿಡ್ ಲಸಿಕೆ ಸಂಗ್ರಹಿಸುವುದಕ್ಕೆ ಅಗತ್ಯವಿರುವ ಶೀತಲೀಕರಣ ಯಂತ್ರದ ವ್ಯವಸ್ಥೆ ಮಾಡಲಾಗಿದೆ. ಈಗ ಲಭ್ಯವಿರುವ 180 ರೆಫ್ರಿಜರೇಟರ್ ಹಾಗೂ 150 ಡೀಪ್ ಫ್ರೀಜರ್‌ಗಳಲ್ಲಿ ಲಸಿಕೆ ಸಂಗ್ರಹಿಸಿ ಸಂರಕ್ಷಿಸಿಡಲಾಗುವುದು. ಇಲ್ಲಿಂದಲೇ ಪಾಲಿಕೆಯ 141 ಪ್ರಾಥಮಿಕ ಆರೋಗ್ಯ ಕೇಂದ್ರ, 28 ಹೆರಿಗೆ ಆಸ್ಪತ್ರೆ, 6 ರೆಫರಲ್ ಆಸ್ಪತ್ರೆ, ಸರ್ಕಾರಿ ಆಸ್ಪತ್ರೆ, ಖಾಸಗಿ ಆಸ್ಪತ್ರೆ, ಮೆಡಿಕಲ್ ಕಾಲೇಜುಗಳಿಗೆ ಲಸಿಕೆ ಸಾಗಿಸಲಾಗುವುದು ಎಂದು ಮಾಹಿತಿ ನೀಡಿದರು.

ವಿಜಯವಾಣಿ ಚಿತ್ರ



ನಗರದ ದಾಸಪ್ಪ ಹೆರಿಗೆ ಆಸ್ಪತ್ರೆಯಲ್ಲಿ ಸಜ್ಜಾಗಿರುವ ಶೈತ್ಯಯಂತ್ರ.

**ಲಸಿಕೆಗೆ ಸಿಸಿ ಕ್ಯಾಮರಾ ನಿಗಾ**

**ದಾಸಪ್ಪ ಆಸ್ಪತ್ರೆಯಲ್ಲಿರುವ ಕೋಲ್ಡ್ ಸ್ಟೋರೆಜ್‌ನಲ್ಲಿ ಲಸಿಕೆ ಸಂಗ್ರಹ ವ್ಯವಸ್ಥೆ ಮಾಡಲಾಗಿದ್ದು, ನಿಗಾ ವಹಿಸಲು ಸಿಸಿ ಕ್ಯಾಮರಾ ಅಳವಡಿಸ ಲಾಗುವುದು. ಆರಂಭದಲ್ಲಿ ಲಸಿಕೆಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಬಿಗಿ ಭದ್ರತೆ ವ್ಯವಸ್ಥೆ ಮಾಡಲಾಗುತ್ತಿದೆ.**

ವಿಜಯವಾಣಿ
ಕನ್ನಡಿಗರ ಧ್ವನಿ

| Date | 20-11-2020 |
| --- | --- |
| Page No | 3 |


# ಅನುಷ್ಠಾನವಾಗದ ಇ-ಆಸ್ತಿ

## 3 ವಾರ್ಡ್‌ಗಳಲ್ಲಿ ಪ್ರಾಯೋಗಿಕ ಜಾರಿ ಹಿನ್ನೆಲೆ | ಪಾಲಿಕೆಗೆ ತಾಂತ್ರಿಕ ಸಮಸ್ಯೆ

■ ಸತೀಶ್ ಕೆ.ಬಳ್ಳಾರಿ ಬೆಂಗಳೂರು

ಕೈಬರಹದ ಖಾತಾ ನಿಷೇಧ ಮಾಡುವ ಉದ್ದೇಶದಿಂದ ಪ್ರಾಯೋಗಿಕವಾಗಿ ಜಾರಿಗೊಳಿಸಿದ 'ಇ-ಆಸ್ತಿ' ತಂತ್ರಾಂಶದ ಪ್ರಾಯೋಗಿಕ ಯೋಜನೆಗೆ ಚಾಲನೆ ನೀಡಿ ವಾರ ಕಳೆದರೂ ಅನುಷ್ಠಾನಗೊಂಡಿಲ್ಲ. ಒಂದೇ ಆಸ್ತಿಯನ್ನು ಹಲವು ಜನರಿಗೆ ಮಾರಾಟ ಮಾಡುವ ರಿಯಲ್ ಎಸ್ಟೇಟ್ ಕರಾಳ ದಂಧೆಗೆ ಬ್ರೇಕ್ ಹಾಕಲು ಇ-ಆಸ್ತಿ ಉಪಯುಕ್ತ ಎಂದು ತಿಳಿದಿದ್ದ ಸಾರ್ವಜನಿಕರಿಗೆ ಹೊಸ ಯೋಜನೆ ಪರಿಚಯವಾಗಿಲ್ಲ.

ಮೊದಲ ಹಂತದಲ್ಲಿ ಆಸ್ತಿಗಳ ಆನ್‌ಲೈನ್ ವ್ಯಾಪ್ತಿಗೆ ತರಲು ಹಳೆಯ ಬೆಂಗಳೂರಿನ 100 ವಾರ್ಡ್‌ಗಳನ್ನು ಆಯ್ಕೆ ಮಾಡಲಾಗಿದೆ.

**» ಸಾರ್ವಜನಿಕರಿಗೆ ಹೊಸ ಯೋಜನೆ ಪರಿಚಯವಾಗಿಲ್ಲ**

ಅದಕ್ಕೂ ಮುನ್ನ ಪ್ರಾಯೋಗಿಕವಾಗಿ ಶಾಂತಿನಗರದ ಕಂದಾಯ ಉಪವಿಭಾಗದ 3 ವಾರ್ಡ್‌ಗಳಲ್ಲಿ ಎರಡು ವಾರಗಳವರೆಗೆ (ನ.13ರಿಂದ 27) ಇ-ಆಸ್ತಿ ಯೋಜನೆ ಜಾರಿಗೊಳಿಸಲಾಗಿದೆ. ಈ ವ್ಯಾಪ್ತಿಯ 21 ಸಾವಿರಕ್ಕೂ ಅಧಿಕ ಆಸ್ತಿ ಮಾಲೀಕರು ತಮ್ಮ ಆಸ್ತಿಗಳನ್ನು ಆನ್‌ಲೈನ್ ನೋಂದಣಿ ಮಾಡಲು ಅವಕಾಶ ನೀಡಲಾಗಿತ್ತು. ಎರಡು ವಾರಗಳ ಪ್ರಾಯೋಗಿಕ ಅವಧಿ ನಂತರ, ಉಳಿದ 100 ವಾರ್ಡ್‌ಗೆ ಯೋಜನೆ ವಿಸ್ತರಿಸಲಾಗುತ್ತದೆ ಎಂದು ಬಿಬಿಎಂಪಿ ತಿಳಿಸಿತ್ತು. ಆದರೆ, ಪ್ರಾಯೋಗಿಕ ಅವಧಿಯ ವಾರ ಪೂರ್ಣಗೊಂಡಿದ್ದರೂ, ಜನರಿಗೆ ಇ-ಆಸ್ತಿಯ ಫಲ ಲಭ್ಯವಾಗಿಲ್ಲ.

**ಲಿಂಕ್ ಸಿಗುತ್ತಿಲ್ಲ:** ಶಾಂತಿನಗರ ಕಂದಾಯ ವಿಭಾಗದ ಸಾರ್ವಜನಿಕರು ಪಾಲಿಕೆ ವೆಬ್‌ಸೈಟ್‌ನ ಇ-ಆಸ್ತಿ ತಂತ್ರಾಂಶದ ಮೂಲಕ ಆಸ್ತಿ ವಿವರ ಭರ್ತಿ ಮಾಡಬೇಕು. ಇದಕ್ಕಾಗಿ ಹೊಸ ನಮೂನೆ ರಚಿಸಲಾಗಿದ್ದು, 46 ಕಾಲಂಗಳಲ್ಲಿ ಆಸ್ತಿಗೆ ಸಂಬಂಧಿಸಿದ ಮಾಹಿತಿ, ಕಟ್ಟಡ ಸ್ಥಳ, ಮಾಲೀಕರ ಭಾವಚಿತ್ರ, ಕಟ್ಟಡದ ಭಾವಚಿತ್ರ, ಚಕ್ಕುಬಂದಿ ಸೇರಿದಂತೆ ಆಸ್ತಿಗೆ ಸಂಬಂಧಿಸಿದ ಸಂಪೂರ್ಣ ತುಂಬಬೇಕಿದೆ. ಆದರೆ, ಪ್ರಾಯೋಗಿಕ ಯೋಜನೆ ಜಾರಿಗೊಂಡು 7 ದಿನ ಕಳೆದರೂ ಬಿಬಿಎಂಪಿ ಇ-ಆಸ್ತಿ ತಂತ್ರಾಂಶ ಲಭ್ಯವಾಗುತ್ತಿಲ್ಲ.



**ಪಾಲಿಕೆಯ ಇ-ಆಸ್ತಿ ನೋಂದಣಿ** ತಂತ್ರಾಂಶವನ್ನು ಸರ್ಕಾರದ ಕಾವೇರಿ ತಂತ್ರಾಂಶಕ್ಕೆ ಸಂಪರ್ಕ ಮಾಡುವ ಕಾರ್ಯ ನಡೆಯುತ್ತಿದೆ. ತಾಂತ್ರಿಕ ಕಾರ್ಯ ವಿಳಂಬವಾಗಿದ್ದು, 2-3 ದಿನಗಳಲ್ಲಿ ಇ-ಆಸ್ತಿ ತಂತ್ರಾಂಶ ಸಾರ್ವಜನಿಕ ಬಳಕೆಗೆ ಲಭ್ಯವಾಗಲಿದೆ.

| ಬಸವರಾಜು ಸಹಾಯಕ ಕಂದಾಯ ಅಧಿಕಾರಿ, ಬಿಬಿಎಂಪಿ

### ತರಾತುರಿಯಲ್ಲಿ ಚಾಲನೆ

ಸರ್ಕಾರದ ಕಾವೇರಿ ಪೋರ್ಟಲ್, ಸಕಾಲ ಮತ್ತು ಉಪ ನೋಂದಣಾಧಿಕಾರಿ ಕಚೇರಿಗೆ ಇ-ಆಸ್ತಿ ತಂತ್ರಾಂಶ ಸಂಪರ್ಕ ಮಾಡುವ ಆಂತರಿಕ ಕಾರ್ಯಗಳು ನಡೆಯುತ್ತಿವೆ. ಆದರೆ, ತಂತ್ರಾಂಶಕ್ಕೆ ಬೇಕಾದ ಸಿದ್ಧತೆ ಪೂರ್ಣಗೊಳ್ಳದಿದ್ದರೂ ಪಾಲಿಕೆ ಆಡಳಿತಾಧಿಕಾರಿ ಗೌರವ್ ಗುಪ್ತ ಮತ್ತು ಆಯುಕ್ತ ಮಂಜುನಾಥ ಪ್ರಸಾದ್ ತರಾತುರಿಯಲ್ಲಿ ಇ-ಆಸ್ತಿ ತಂತ್ರಾಂಶದ ಪ್ರಾಯೋಗಿಕ ಯೋಜನೆಗೆ ಚಾಲನೆ ನೀಡಿದ್ದಾರೆ.

### ದಾಖಲೆ ಪಡೆಯಲು ಪರದಾಟ

ಪ್ರಾಯೋಗಿಕ ಇ-ಆಸ್ತಿ ಜಾರಿಗೊಂಡ ವಾರ್ಡ್‌ಗಳಲ್ಲಿ ನ.13ರಿಂದ ಅಧಿಕಾರಿಗಳು ಕೈಬರಹದ ಆಸ್ತಿ ದಾಖಲೆ ನೀಡಬಾರದು ಎಂದು ಆಡಳಿತಾಧಿಕಾರಿ ಆದೇಶಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕೈಬರಹದ ಆಸ್ತಿ ದಾಖಲೆಗಳು ಇಲ್ಲದೆ, ಆನ್‌ಲೈನ್ ತಂತ್ರಾಂಶವೂ ಲಭ್ಯವಾಗದೆ ಆಸ್ತಿ ದಾಖಲೆ ಪಡೆಯಲು ಸಾರ್ವಜನಿಕರು ಪರದಾಡುವಂತಾಗಿದೆ.




ಪಾಲಿಕೆಯ ಇ-ಆಸ್ತಿ ತಂತ್ರಾಂಶದ ವೆಬ್‌ಸೈಟ್ ಸ್ಥಿತಿ.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 20-11-2020 |
| --- | --- |
| Page No | 4 |

# ಸಾವಿರಕ್ಕಿಂತ ಅಧಿಕ ಸೋಂಕಿತರು ಪತ್ತೆ

**ಬೆಂಗಳೂರು:** ನಗರದಲ್ಲಿ ಗುರುವಾರ 1,048 ಹೊಸ ಸೋಂಕಿತರು ಪತ್ತೆಯಾಗುವ ಮೂಲಕ ಸತತ ನಾಲ್ಕು ದಿನಗಳ ಬಳಿಕ 1 ಸಾವಿರಕ್ಕಿಂತ ಅಧಿಕ ಪ್ರಕರಣ ಪತ್ತೆಯಾಗಿದೆ. ಒಟ್ಟು ಕರೊನಾ ಸೋಂಕಿತ ಪ್ರಕರಣ ಸಂಖ್ಯೆ 3,60,587ಕ್ಕೆ ಏರಿಕೆಯಾಗಿದೆ.

**1,048**
**ಹೊಸ ಸೋಂಕಿತರು**

**17**
**ಮಂದಿ ಸಾವು**

ಕರೊನಾ ಸೋಂಕಿನಿಂದ 881 ಮಂದಿ ಗುಣಮುಖರಾಗಿದ್ದು, ಒಟ್ಟು ಗುಣಮುಖರ ಸಂಖ್ಯೆ 3,38,688ಕ್ಕೆ ತಲುಪಿದೆ. ಸೋಂಕಿಗೆ 14 ಮಂದಿ ಬಲಿಯಾಗುವ ಮೂಲಕ ಒಟ್ಟು ಮೃತರ ಸಂಖ್ಯೆ 4,042ಕ್ಕೆ ಏರಿಕೆಯಾಗಿದೆ.

17,856 ಸಕ್ರಿಯ ಪ್ರಕರಣಗಳಿದ್ದು, ಇದರಲ್ಲಿ 297 ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ವಿಶ್ವವಾಣಿ

| Date | 20-11-2020 |
|---|---|
| Page No | 3 |


# ಮನೆ ಬಾಗಿಲಿಗೆ ಬಂದು ಕಸ ವಿಲೇವಾರಿ

**ಬೆಂಗಳೂರು:** ನಗರದ ಕಸ ಸಮಸ್ಯೆಗೆ ಪರಿಹಾರ ಒದಗಿಸಲು ಮುಂದಾಗಿರುವ ಬಿಬಿಎಂಪಿ ಜನರ ಮನೆ ಬಾಗಿಲಿಗೆ ಬಂದು ಕಸ ಸ್ವೀಕರಿಸಲು ಚಿಂತನೆ ನಡೆಸುತ್ತಿದೆ.

ಪ್ರತಿ ತಿಂಗಳು 200ರು ಕಟ್ಟಿದರೆ ಬಿಬಿಎಂಪಿ ಸಿಬ್ಬಂದಿ ಬಂದು ಕಸ ಸ್ವೀಕರಿಸಲಿದ್ದು, ಪ್ರತಿ ವರ್ಷ ಆಸ್ತಿ ತೆರಿಗೆ ಕಟ್ಟುವ ಸಮಯದಲ್ಲಿ ಈ ಹಣವನ್ನು ಕಟ್ಟಬಹುದು ಎಂದು ಹೇಳಲಾಗುತ್ತಿದ್ದು, ಹೊಸ ಯೋಜನೆ ಜನವರಿ ತಿಂಗಳಿನಿಂದಲೇ ಜಾರಿಯಾಗಲಿದೆ ಎಂದು ಹೇಳಲಾಗುತ್ತಿದೆ. ಕಳೆದ ಜೂನ್‌ನಲ್ಲೇ ಬಿಬಿಎಂಪಿ ಈ ಕಸ ನಿರ್ವಹಣೆ ಉಪನಿಯಮಕ್ಕೆ ಒಪ್ಪಿಗೆ ನೀಡಿದ್ದು, ಹೊಸ ನಿಯಮಗಳ ಕಾರಣಗಳಿಂದ ಜಾರಿಗೆ ಬಂದಿರಲಿಲ್ಲ. ಆದರೆ ಈಗ ಹೊಸ ನಿಯಮವನ್ನು ಜಾರಿಗೆ ತರಲು ಬಿಬಿಎಂಪಿ ಮುಂದಾಗಿದೆ.

ಹೊಸ ನಿಯಮ ಜಾರಿಗೆ ತರಲು ಎಲ್ಲಾ ವಿಧಾನ ಹಾಗೂ ಸೌಲಭ್ಯಗಳನ್ನು ಒದಗಿಸುವ ಕುರಿತು ಕಾರ್ಯ ನಿಭಾಯಿಸಲಾಗುತ್ತಿದೆ. ಜನವರಿ ತಿಂಗಳಿನಲ್ಲಿ ನಿಯಮವನ್ನು ಪೂರ್ಣ ಪ್ರಮಾಣದಲ್ಲಿ ಕಾರ್ಯಗತಗೊಳಿಸಲಾಗುತ್ತದೆ. ಮುಂಬರುವ ಚುನಾವಣೆಗೆ ಸಿದ್ಧತೆಗಳು ನಡೆಯುತ್ತಿದ್ದು, ಹೆಚ್ಚುವರಿ ಶುಲ್ಕ ವಿಧಿಸಲಾಗುತ್ತದೆ ಎಂಬುದು ತಪ್ಪು ಮಾಹಿತಿಯಾಗಿದೆ. ಇದೆಲ್ಲಾ ಸುಳ್ಳು, ಬಿಬಿಎಂಪಿಯ ಕಸ ನಿರ್ವಹಣೆ ಉಪನಿಯಮ-2020ರ ಅನ್ವಯ ಶುಲ್ಕವನ್ನು ವಿಧಿಸಲಾಗುತ್ತದೆ ಎಂದು ಬಿಬಿಎಂಪಿ ವಿಶೇಷ ಆಯುಕ್ತ ಡಿ.ರಂದೀಪ್ ಅವರು ಹೇಳಿದ್ದಾರೆ. ನಗರ ದಲ್ಲಿ 1 ಕೋಟಿಗೂ ಹೆಚ್ಚು ಜನಸಂಖ್ಯೆಯಿ ಎದ್ದು, ಇದರಲ್ಲಿ 32 ಲಕ್ಷ ಮನೆಗಳನ್ನು ಲೆಕ್ಕ ಹಾಕಲಾಗಿದೆ. ಆರಂಭದಲ್ಲಿಯೇ ಹಣವನ್ನು ಸಂಗ್ರಹ ಮಾಡಲಾಗುತ್ತದೆ. ಇದು ದಂಡ ವಲ್ಲ, ಸರಕಾರಿ ಸಂಸ್ಥೆಗಳಂತೆಯೇ ನಾವೂ ಸೇನಾ ಶುಲ್ಕವನ್ನು ಪಡೆಯಲಾಗುತ್ತದೆ ಎಂದರು.

ವಿಶ್ವವಾಣಿ

| Date | 20-11-2020 |
|---|---|
| Page No | 3 |

# ಮತದಾರರ ಕರಡು ಪಟ್ಟಿ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯ 28 ವಿಧಾನ ಸಭಾ ಕ್ಷೇತ್ರಗಳ ಮತದಾರರ ಕರಡು ಪಟ್ಟಿಯನ್ನು ಆಯಾ ಕ್ಷೇತ್ರದ ಮತದಾರರ ನೋಂದಣಾಧಿಕಾರಿ, ಮತದಾರರ ಸಹಾಯಕ ನೋಂದಣಾಧಿಕಾರಿ ಕಚೇರಿಗಳಲ್ಲಿ ಹಾಗೂ ವಾರ್ಡ್ ಕಚೇರಿಗಳಲ್ಲಿ ಪ್ರಕಟಿಸಲಾಗಿದೆ. ಕರಡು ಪಟ್ಟಿಯಲ್ಲಿ ತಮ್ಮ ಹಾಗೂ ಕುಟುಂಬದ ಸದಸ್ಯರ ಹೆಸರು ಇದೆಯೇ ಎಂಬುದನ್ನು ಮತದಾರರು ಖಾತರಿಪಡಿಸಿಕೊಂಡು,ತಿದ್ದುಪಡಿಗಳಿದ್ದರೆ ಆಯಾ ಕ್ಷೇತ್ರದ ಮತದಾರರ ನೋಂದಣಾಧಿಕಾರಿ ಕಚೇರಿಗೆ ಆಕ್ಷೇಪಣೆಗಳನ್ನು ಡಿ 17ರ ಒಳಗೆ ಸಲ್ಲಿಸಬಹುದು ಎಂದು ಜಿಲ್ಲಾ ಚುನಾವಣಾಧಿಕಾರಿ ಎನ್. ಮಂಜುನಾಥ ಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮತದಾರರ ನೋಂದಣಾಧಿಕಾರಿ, ಮತದಾರರ ಸಹಾಯಕ ನೋಂದಣಾಧಿಕಾರಿ ಹಾಗೂ ವಾರ್ಡ್ ಕಚೇರಿಗಳ ವಿಳಾಸಕ್ಕಾಗಿ ಬಿಬಿಎಂಪಿ ವೆಬ್‌ಸೈಟ್ https://bbmp.gov.in/ ನೋಡಬಹುದಾಗಿದೆ.

ಉದಯವಾಣಿ
ಜನಮನದ ಜೀವನಾಡಿ

| Date | 20-11-2020 |
| --- | --- |
| Page No | 1 |

ಕಾಲೇಜಿಗೆ ಬರುವ ಮುನ್ನವೇ ವಿದ್ಯಾರ್ಥಿಗಳಿಗೆ ಟೆಸ್ಟ್ | ಅಂದಾಜು 25 ಸಾವಿರ ಮಂದಿಗೆ ಕೊರೊನಾ ಪರೀಕ್ಷೆ

# 72 ವಿದ್ಯಾರ್ಥಿಗಳಿಗೆ ಕೊರೊನಾ ಸೋಂಕು

**ಬೆಂಗಳೂರು:** ಅಂತಿಮ ಪದವಿ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳು ಆರಂಭವಾಗಿದ್ದರೂ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಕಾಲೇಜಿಗೆ ಬರುತ್ತಿಲ್ಲ, ಇದಕ್ಕೆ ಕೊರೊನಾ ಆತಂಕ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಇದರ ನಡುವೆಯೇ ಸಮಾಧಾನಕರ ಅಂಶವೊಂದು ಬಯಲಾಗಿದೆ. ರಾಜ್ಯದಲ್ಲಿ ಅಂದಾಜು 25 ಸಾವಿರ ವಿದ್ಯಾರ್ಥಿಗಳಲ್ಲಿ ಕೊರೊನಾ ಪರೀಕ್ಷೆ ಮಾಡಿಸಲಾಗಿದ್ದು, 72 ಮಂದಿಗಷ್ಟೇ ಪಾಸಿಟಿವ್ ಬಂದಿದೆ.

ಮಂಗಳವಾರದಿಂದಲೇ ರಾಜ್ಯದಲ್ಲಿ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ ಹಾಗೂ ಎಂಜಿನಿಯರಿಂಗ್ ಕೋರ್ಸ್‌ಗಳ ಅಂತಿಮ ವರ್ಷದ ವಿದ್ಯಾರ್ಥಿಗಳು ತರಗತಿ ಆರಂಭವಾಗಿದೆ. ಆದರೆ, ಬಹುತೇಕ ವಿದ್ಯಾರ್ಥಿಗಳು ಆನ್‌ಲೈನ್ ವ್ಯವಸ್ಥೆಯಲ್ಲೇ ಕಲಿಕೆ ಮುಂದುವರಿಸಿದ್ದು, ಆನ್‌ಲೈನ್ ತರಗತಿಯಲ್ಲೇ ಭಾಗವಹಿಸುತ್ತಿದ್ದಾರೆ. ಕೊರೊನಾ ಪರೀಕ್ಷೆ ಕಡ್ಡಾಯ ಮಾಡಿರುವುದರಿಂದ ಕೆಲವರು ಕೊರೊನಾ ಪರೀಕ್ಷೆಗೆ ಒಳಪಡಲು ಹಿಂದೇಟು ಹಾಕಿದ್ದು ಆದರೆ, ಕೆಲವು ಕಡೆಗಳಲ್ಲಿ ವಿದ್ಯಾರ್ಥಿಗಳು ಕೊರೊನಾ ಟೆಸ್ಟ್ ಮಾಡಿಸಿಕೊಂಡೇ ತರಗತಿಗೆ ಬರುತ್ತಿದ್ದು ಅತಿ ಕಡಿಮೆ ವಿದ್ಯಾರ್ಥಿಗಳಲ್ಲಿ ಸೋಂಕು ಕಾಣಿಸಿಕೊಂಡಿರುವುದು ಸಮಾಧಾನ ತಂದಿದೆ.



ವಿದ್ಯಾರ್ಥಿಗಳು ಆತಂಕ ಬೇಡ. ದಿನೇ ದಿನೆ ಕಾಲೇಜಿಗೆ ಬರುವವರ ಸಂಖ್ಯೆ ಹೆಚ್ಚಾಗುತ್ತಿದೆ.
• ಎಸ್. ಮಲ್ಲೇಶ್ವರಪ್ಪ
ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕ

ಬೆಂಗಳೂರಿನಲ್ಲಿ ಶೈಕ್ಷಣಿಕ ವರ್ಷದ ಕಾಲೇಜು ತರಗತಿಗಳು ಆರಂಭವಾದ ಹಿನ್ನೆಲೆಯಲ್ಲಿ ನಗರದಲ್ಲಿ ಎರಡು ದಿನಗಳಲ್ಲಿ 18000 ವಿದ್ಯಾರ್ಥಿಗಳಿಗೆ ಸೋಂಕು ಪರೀಕ್ಷೆ ನಡೆಸಲಾಗಿದ್ದು ಇದರಲ್ಲಿ 57 ಜನ ವಿದ್ಯಾರ್ಥಿಗಳಲ್ಲಿ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಬಳ್ಳಾರಿಯಲ್ಲಿ ಜಿಲ್ಲೆಯಾದ್ಯಂತ 7 ವಿದ್ಯಾರ್ಥಿಗಳಲ್ಲಿ ಪಾಸಿಟಿವ್ ಬಂದಿದೆ. ಬಳ್ಳಾರಿ ತಾಲೂಕು 2, ಹೊಸಪೇಟೆ 3, ಕೂಡ್ಲಿಗಿ ತಾಲೂಕು ಇಬ್ಬರು ವಿದ್ಯಾರ್ಥಿಗಳಲ್ಲಿ ಸೋಂಕು ಪತ್ತೆಯಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಎಚ್.ಎಲ್.ಜನಾರ್ದನ್ ಮಾಹಿತಿ ನೀಡಿದ್ದಾರೆ.

ಹಾಸನದಲ್ಲಿ ಎರಡು ದಿನಗಳಿಂದ ಜಿಲ್ಲೆಯಲ್ಲಿ ನಡೆಯುತ್ತಿರುವ ಕೊರೊನಾ ಪರೀಕ್ಷೆಯಲ್ಲಿ ಜಿಲ್ಲೆಯ 6 ವಿದ್ಯಾರ್ಥಿಗಳಿಗೆ ಪಾಸಿಟಿವ್ ವರದಿ ಬಂದಿದೆ ಎಂದು ಡಿಎಚ್‌ಒ ಡಾ.ಸತೀಶ್ ಕುಮಾರ್ ಮಾಹಿತಿ ನೀಡಿದ್ದಾರೆ. ವಿಜಯಪುರ ಜಿಲ್ಲೆಯಲ್ಲಿ 646 ವಿದ್ಯಾರ್ಥಿಗಳ ಗಂಟಲು ದ್ರವ ಮಾದರಿ ಪರೀಕ್ಷಿಸಿದ್ದು, ಇಬ್ಬರಿಗೆ ಕೋವಿಡ್ ಕೊರೊನಾ ಸೋಂಕು ಇರುವುದು ದೃಢಪಟ್ಟಿದೆ.

ಕೋಲಾರ ಜಿಲ್ಲೆಯಲ್ಲಿ ನಡೆದ ವಿದ್ಯಾರ್ಥಿಗಳ ಕೊರೊನಾ ಪರೀಕ್ಷೆಯಲ್ಲಿ ವಿದ್ಯಾರ್ಥಿಗೆ ಪಾಸಿಟಿವ್ ಬಂದಿರುವುದಿಲ್ಲ, ಕೋಲಾರ ಜಿಲ್ಲೆಯಲ್ಲಿ ಮೂರು ದಿನಗಳಿಂದಲೂ 300-400 ಸಂಖ್ಯೆಯ ವಿದ್ಯಾರ್ಥಿಗಳು ಕೊರೊನಾ ಪರೀಕ್ಷೆಗೊಳಪಡುತ್ತಿದ್ದು, ಗುರುವಾರವರೆಗೂ ವಿದ್ಯಾರ್ಥಿ ಸೋಂಕಿತರು ಕಂಡು ಬಂದಿಲ್ಲ, ಎಂದು ಕೊರೊನಾ ಅಧಿಕಾರಿ ಡಾ.ಚಾರಿಣಿ ತಿಳಿಸಿದ್ದಾರೆ.

ಉಳಿದ ಹೆಚ್ಚಿನ ಜಿಲ್ಲೆಗಳಲ್ಲಿ ಕೊರೊನಾ ಪರೀಕ್ಷೆಗಳನ್ನು ಮಾಡಲಾಗಿದ್ದರೂ, ಕಾಲೇಜು ವಿದ್ಯಾರ್ಥಿಗಳ ಅಂಕಿ ಅಂಶಗಳನ್ನು ದಾಖಲಿಸಿಲ್ಲ, ಎಷ್ಟು ಕಾಲೇಜು ವಿದ್ಯಾರ್ಥಿಗಳು, ಸಿಬ್ಬಂದಿ ಇದ್ದಾರೆ ಎಂಬ ಬಗ್ಗೆ ಪ್ರತ್ಯೇಕವಾಗಿ ಮಾಹಿತಿ ಸಂಗ್ರಹಿಸಿಲ್ಲ ಎಂದು ಜಿಲ್ಲಾ ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಉದಯವಾಣಿ
ಜನಮನದ ಜೀವನಾಡಿ

| Date | 20-11-2020 |
|---|---|
| Page No | 2 |

# ಕೊರೊನಾ ಲಸಿಕೆ ಸಂಗ್ರಹಕ್ಕೆ ದಾಸಪ್ಪ ಆಸ್ಪತ್ರೆ ಸಿದ್ಧ

## ಆಸ್ಪತ್ರೆಯ ದಾಸ್ತಾನು ಕೇಂದ್ರದ ಲಸಿಕೆ ಸ್ಟೋರ್ ಮಾಡುವ ಬಾಕ್ಸ್‌ಗಳ ಪರಿಶೀಲಿಸಿದ ಆಯುಕ್ತ ಮಂಜುನಾಥ್

**ಬೆಂಗಳೂರು:** ನಗರದ ಟೌನ್‌ಹಾಲ್ ಬಳಿಯ ದಾಸಪ್ಪ ಆಸ್ಪತ್ರೆಯಲ್ಲಿ ಕೊರೊನಾ ಲಸಿಕೆ ಸಂಗ್ರಹಕ್ಕೆ ಸಿದ್ಧತೆಗಳು ನಡೆದಿವೆ. ಆ ಹಿನ್ನೆಲೆಯಲ್ಲಿ ಆಸ್ಪತ್ರೆಯ ಸುತ್ತಮುತ್ತ ಸಿ.ಸಿ. ಟಿವಿ ಕ್ಯಾಮೆರಾಗಳನ್ನು ಕೂಡ ಅಳವಡಿಕೆ ಮಾಡಲಾಗಿದೆ. ಅಲ್ಲದೆ ಕೋಲ್ಡ್ ಸ್ಟೋರೆಜ್ ಸೌಲಭ್ಯವನ್ನು ಕೂಡ ಕಲ್ಪಿಸಲಾಗುತ್ತಿದೆ.

ಲಸಿಕೆ ಸಂಗ್ರಹದ ಸಿದ್ಧತೆ ಹಿನ್ನೆಲೆಯಲ್ಲಿ ಪಾಲಿಕೆ ಆಯುಕ್ತ ಮಂಜುನಾಥ್ ಪ್ರಸಾದ್ ಅವರು ಗುರುವಾರ ದಾಸಪ್ಪ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಲ್ಲದೆ ಆಸ್ಪತ್ರೆಯಲ್ಲಿರುವ ದಾಸ್ತಾನು ಕೇಂದ್ರದ ಲಸಿಕೆ ಸ್ಟೋರ್ ಮಾಡುವ ಬಾಕ್ಸ್‌ಗಳನ್ನು ಕೂಡ ಪರಿಶೀಲಿಸಿದರು.

**ಈಗಾಗಲೇ ಬಿಬಿಎಂಪಿ ಸಿದ್ಧತೆ:** ಈ ಬಗ್ಗೆ ಪತ್ರಿಕ್ರಿಯೆ ನೀಡಿದ ಪಾಲಿಕೆ ಆಯುಕ್ತ ಮುಂಜುನಾಥ್ ಪ್ರಸಾದ್, ಈ ವರ್ಷದ ಡಿಸೆಂಬರ್ ಅಂತ್ಯದ ವೇಳೆಗೆ ಲಭ್ಯವಾಗಲಿದ್ದು 94 ಸಾವಿರ ಕೊರೊನಾ ವಾರಿಯರ್ಸ್‌ಗೆ ಮೊದಲ ಹಂತದಲ್ಲಿ ಲಸಿಕೆ ನೀಡಲು ಈಗಾಗಲೇ ಬಿಬಿಎಂಪಿ ಸಿದ್ಧತೆ ಮಾಡಿಕೊಂಡಿದೆ ಎಂದು ತಿಳಿಸಿದರು.

**ಆಸ್ಪತ್ರೆ ಸುತ್ತಮುತ್ತ ನಿಗಾ:** 175 ರೆಫ್ರಿಜರೇಟರ್ ಮತ್ತು 150 ಡೀಪ್ ರೆಫ್ರಿಜರೇಟರ್ ಇರಿಸಲು ಸಿದ್ಧತೆ ನಡೆದಿದೆ. ಅಲ್ಲದೆ ಆಸ್ಪತ್ರೆ ಸುತ್ತಮುತ್ತ ನಿಗಾ ಇರಿಸಲು ಭದ್ರತಾ ವ್ಯವಸ್ಥೆ ಕಲ್ಪಿಸಲಾಗುವುದು. ಲಸಿಕೆ ಸಂಗ್ರಹಕ್ಕೆ ಹೆಚ್ಚಿನ ಸ್ಥಳದ ಅವಶ್ಯಕತೆ ಇದಲ್ಲಿ ಮತ್ತಷ್ಟು ಆಸ್ಪತ್ರೆಗಳನ್ನು ಬಳಕೆ ಮಾಡಿಕೊಳ್ಳುವ ಕುರಿತಂತೆ ಚಿಂತನೆ ಇದೆ ಎಂದು ಹೇಳಿದರು.

**ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ:** ಬಿಬಿಎಂಪಿ ಅಧಿಕಾರಿಗಳು ನೀಡಿದ ಮಾಹಿತಿ ಅನುಸಾರವಾಗಿ ಕೇಂದ್ರ ಸರ್ಕಾರ ಕೊರೊನಾ ಲಸಿಕೆ ಬಿಡುಗಡೆ ಮಾಡಲಿದೆ. ವ್ಯಾಕ್ಸಿನ್ ಸ್ಟೋರೆಜ್ ನಂತರ ಯಾವ ರೀತಿಯಲ್ಲಿ ಫಲಾನುಭವಿಗಳಿಗೆ ಲಸಿಕೆ ತಲುಪಿಸಬೇಕು ಎಂಬುವುದರ ಬಗ್ಗೆಕೂಡ ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗುವದು ಎಂದರು.

ನ.22 ರಂದು ಲಸಿಕೆ ಬಗ್ಗೆ ಆರೋಗ್ಯ ಅಧಿಕಾರಿಗಳ ಕೇಂದ್ರಕ್ಕೆ ಪತ್ರ ಪಡೆದು ಮಾಹಿತಿ ನೀಡಲಿದ್ದಾರೆ. ಪಾಲಿಕೆ ಅಧಿಕಾರಿಗಳ ಜತೆಗೆ ಆರೋಗ್ಯ ಇಲಾಖೆ, ಪಶುಸಂಗೋಪನೆ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳು ಒಟ್ಟಿಗೆ ಸೇರಿ ವ್ಯಾಕ್ಸಿನ್ ನೀಡಲು ಸಿದತೆ ಮಾಡಿ ಕೊಳಲಾಗುವದು ಎಂದು ತಿಳಿಸಿದರು.



ನಗರದ ಟೌನ್‌ಹಾಲ್ ಬಳಿಯ ದಾಸಪ್ಪ ಆಸ್ಪತ್ರೆಯಲ್ಲಿ ಕೊರೊನಾ ಲಸಿಕೆ ಸಂಗ್ರಹಕ್ಕೆ ಸಿದ್ಧತೆಗಳು.

### ಸೋಂಕಿತರ ಸಂಖ್ಯೆ ಏರಿಕೆ

ನಗರದಲ್ಲಿಗುರುವಾರ ಕೋವಿಡ್ ಸೋಂಕಿತರ ಸಂಖ್ಯೆಯಲ್ಲಿಏರಿಕೆ ಆಗಿದೆ. 1048 ಹೊಸ ಪ್ರಕರಣಗಳು ಕಂಡು ಬಂದಿದ್ದು ಒಟ್ಟಾರೆ ಸೋಂಕಿತರ ಸಂಖ್ಯೆ 3,60,587ಕ್ಕೆ ಏರಿಕೆ ಆಗಿದೆ. ಪುರುಷರು ಮತ್ತು ಮಹಿಳೆಯರು ಸೇರಿದಂತೆ 14 ಮಂದಿ ಸಾವಿಗೀಡಾಗಿದ್ದು ಸಾವಿನ ಸಂಖ್ಯೆ 4042ಕ್ಕೆ ಹೆಚ್ಚಳವಾಗಿದೆ. ಅಲ್ಲದೆ 881 ಮಂದಿ ಗುಣಮುಖರಾಗಿದ್ದು ಒಟ್ಟಾರೆ ಗುಣಮುಖರಾಗಿರುವ ಸಂಖ್ಯೆ 3,60,587ಕ್ಕೆ ಏರಿದೆ. ನಗರದಲ್ಲಿ 17856 ಸಕ್ರಿಯ ಪ್ರಕರಣಗಳು ಕಂಡುಬಂದಿವೆ.

**1048** ಹೊಸ ಪ್ರಕರಣ

**881** ಗುಣಮುಖರು

**14** ಸೋಂಕಿತರ ಸಾವು

**3,60,587** ಒಟ್ಟಾರೆ ಸೋಂಕಿತ ಪ್ರಕರಣ



**3,38,688** ಒಟ್ಟಾರೆ ಗುಣಮುಖ

**4042** ಒಟ್ಟಾರೆ ಸಾವು

**17856** ಸಕ್ರಿಯ ಪ್ರಕರಣಗಳು



### ಡಿಸೆಂಬರ್ ಅಂತ್ಯಕ್ಕೆ ಲಸಿಕೆ: ಆಯುಕ್ತ

ಡಿಸೆಂಬರ್ ವರ್ಷಾಂತ್ಯದಲ್ಲಿಕೊರೊನಾ ಲಸಿಕೆ ಬೆಂಗಳೂರಿಗೆ ಲಭ್ಯವಾಗಲಿದ್ದು ಪ್ರಾಥಮಿಕ ಹಂತದಲ್ಲಿ 94 ಸಾವಿರ ಜನರಿಗೆ ವ್ಯಾಕ್ಸಿನ್ ದೊರೆಯಲಿದೆ. ಇದರಲ್ಲಿಬಿಬಿಎಂಪಿ ಆಸ್ಪತ್ರೆ ಹಾಗೂ ಸರ್ಕಾರಿ ಆಸ್ಪತ್ರೆಯ 8 ಸಾವಿರ ಮಂದಿಗೆ, ಡೆಂಟಲ್, ಮೆಡಿಕಲ್, ಪ್ಯಾರ ಮೆಡಿಕಲ್ ಸಿಬ್ಬಂದಿ ವರ್ಗ ಸೇರಿದಂತೆ ಸುಮಾರು 74 ಸಾವಿರ ಜನರಿಗೆ ಲಸಿಕೆ ನೀಡಲಾಗುವುದು. ಹಾಗೆಯೇ 4350 ಖಾಸಗಿ ಆಸ್ಪತ್ರೆಗಳ ಸಿಬ್ಬಂದಿಗೆ ಮತ್ತು 1800 ಅಂಗನವಾಡಿ ಸಿಬ್ಬಂದಿಗೆ ಕೊರೊನಾ ಲಸಿಕೆ ನೀಡಲಾಗುವುದು ಎಂದು ಆಯುಕ್ತ ಮಂಜುನಾಥ್ ಪ್ರಸಾದ್ ಮಾಹಿತಿ ನೀಡಿದ್ದಾರೆ.

ಉದಯವಾಣಿ
ಜನಮನದ ಜೀವನಾಡಿ

| Date | 20-11-2020 |
|---|---|
| Page No | 5 |



# ಸಂಯುಕ್ತ ಕರ್ನಾಟಕ

| Date | 20-11-2020 |
| --- | --- |
| Page No | 3 |



ದಾಸಪ್ಪ ಆಸ್ಪತ್ರೆಯಲ್ಲಿರುವ ಕೋಲ್ಡ್ ಸ್ಟೋರೇಜ್‌ನಲ್ಲಿ ವ್ಯಾಕ್ಸಿನ್ ಸಂಗ್ರಹಿಸುವುದರಿಂದ ಸಂಗ್ರಹ ಕೇಂದ್ರಕ್ಕೆ ಸಿಸಿ ಕ್ಯಾಮರಾ ಅಳವಡಿಸುವುದರೊಂದಿಗೆ ಬಿಗಿ ಭದ್ರತೆ ವ್ಯವಸ್ಥೆ ಮಾಡಲಾಗುತ್ತಿದೆ.

■ ಎನ್. ಮಂಜುನಾಥ ಪ್ರಸಾದ್

| ಬಿಬಿಎಂಪಿ ಆಯುಕ್ತ

ಸಂಯುಕ್ತ ಕರ್ನಾಟಕ

| Date | 20-11-2020 |
| --- | --- |
| Page No | 3 |

# ಬಿಬಿಎಂಪಿ ಚುನಾವಣೆ ಇಂದು ತೀರ್ಪು ನಿರೀಕ್ಷೆ

**ಬೆಂಗಳೂರು:** ಬಿಬಿಎಂಪಿ ಚುನಾವಣೆ ನಡೆಸುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿ ವಿಚಾರಣೆ ನಡೆಸಿರುವ ಹೈಕೋರ್ಟ್ ಈ ಸಂಬಂಧದ ತೀರ್ಪನ್ನು ಶುಕ್ರವಾರಕ್ಕೆ ಕಾಯ್ದಿರಿಸಿದೆ.



ಸಕಾಲಕ್ಕೆ ಬಿಬಿಎಂಪಿ ಚುನಾವಣೆ ನಡೆಸುವಂತೆ ಸರ್ಕಾರಕ್ಕೆ ಸೂಚಿಸುವಂತೆ ಬಿಬಿಎಂಪಿ ಮಾಜಿ ಸದಸ್ಯರಾದ ಎಂ.ಶಿವರಾಜ್ ಮತ್ತು ಅಬ್ದುಲ್ ವಾಜಿದ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಓಕಾ ಅವರನ್ನೊಳಗೊಂಡ ವಿಭಾಗೀಯ ಪೀಠ ತೀರ್ಪನ್ನು ಶುಕ್ರವಾರ ಮಧ್ಯಾಹ್ನ 2.30ಕ್ಕೆ ಮುಂದೂಡಿದೆ. ಮೇಯರ್ ಗೌತಮ್‌ಕುಮಾರ್ ಅವರ ಅಧಿಕಾರಾವಧಿ ಮುಗಿಯುತ್ತಿದ್ದಂತೆ ಬಿಬಿಎಂಪಿಯ 198 ವಾರ್ಡ್‌ಗಳನ್ನು ವಿಸರ್ಜಿಸಿ 243 ವಾರ್ಡ್ ರಚಿಸುವ ಪ್ರಕ್ರಿಯೆಗೆ ಸರ್ಕಾರ ಚಾಲನೆ ನೀಡಿರುವುದರಿಂದ ಸಕಾಲಕ್ಕೆ ಚುನಾವಣೆ ನಡೆಸಲು ಸಾಧ್ಯವಾಗಿರಲಿಲ್ಲ. ಬಿಬಿಎಂಪಿ ಚುನಾವಣೆ ನಡೆಸಲು ಸಿದ್ಧರಾಗಿದ್ದರೂ ಸರ್ಕಾರದಿಂದ ಸ್ಪಂದನೆ ಸಿಗುತ್ತಿಲ್ಲ ಎಂದು ಚುನಾವಣಾ ಆಯೋಗ ಕೋರ್ಟ್ ಮೆಟ್ಟಿಲೇರಿತ್ತು. ಇದೇ ವೇಳೆ ಪಾಲಿಕೆ ಮಾಜಿ ಸದಸ್ಯರಾದ ಶಿವರಾಜ್ ಮತ್ತು ಅಬ್ದುಲ್ ವಾಜಿದ್ ಅವರುಗಳುಸಲ್ಲಿಸಿದ್ದ ಅರ್ಜಿಯನ್ನು ಆಯೋಗದ ವಿಚಾರಣೆಯ ಜತೆಗೆ ಕೈಗೆತ್ತಿಕೊಂಡ ನ್ಯಾಯಾಲಯ ಸರ್ಕಾರಕ್ಕೆ ನೋಟೀಸ್ ನೀಡಿ ಸಮಜಾಯಿಷಿ ನೀಡುವಂತೆ ಸೂಚಿಸಿತ್ತು. ಸರ್ಕಾರ ಬಿಬಿಎಂಪಿಗೆ ಚುನಾವಣೆ ನಡೆಸಲು ಸಿದ್ಧ. ಆದರೆ 198 ವಾರ್ಡ್‌ಗಳನ್ನು 243 ವಾರ್ಡ್‌ಗಳನ್ನಾಗಿ ಪುನರ್ ವಿಂಗಡಿಸಿ ಬೆಂಗಳೂರಿಗೆ ಪ್ರತ್ಯೇಕ ಕಾಯ್ದೆ ರಚಿಸಿ ಚುನಾವಣೆ ನಡೆಸುವುದಾಗಿ ನ್ಯಾಯಾಲಯಕ್ಕೆ ತಿಳಿಸಿತ್ತು. ವಾದ-ಪ್ರತಿವಾದವನ್ನು ಆಲಿಸಿದ ನ್ಯಾಯಪೀಠ ತೀರ್ಪನ್ನು ಶುಕ್ರವಾರಕ್ಕೆ ಕಾಯ್ದಿರಿಸಿತು.

# 1500 ಕೋಟಿ ತೆರಿಗೆ ಸಂಗ್ರಹಕ್ಕೆ ಸೂಚನೆ

**ಬೆಂಗಳೂರು:** ಮುಂದಿನ ನಾಲ್ಕು ತಿಂಗಳಲ್ಲಿ ಹೆಚ್ಚುವರಿಯಾಗಿ 1,500 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹಿಸುವಂತೆ ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ಕಂದಾಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಬಿಬಿಎಂಪಿ ಕಂದಾಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಬಿಬಿಎಂಪಿ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಹೆಚ್ಚಿನ ಪ್ರಮಾಣ ಸಂಪನ್ಮೂಲ ಕ್ರೋಢೀಕರಣ ಮಾಡಬೇಕಾಗಿದೆ. ಈವರೆಗೆ ಸುಮಾರು 2,250 ಕೋಟಿ ರು. ಆಸ್ತಿ ತೆರಿಗೆ ಸಂಗ್ರಹಿಸಿದ್ದು, ಮುಂದಿನ ನಾಲ್ಕು ತಿಂಗಳಲ್ಲಿ ಹೆಚ್ಚುವರಿಯಾಗಿ 1,500 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹಿಸಬೇಕು.



ಮುಖ್ಯವಾಗಿ ವಲಯ ಹಾಗೂ ಕಂದಾಯ ಉಪ ವಿಭಾಗದ ಹಂತದಲ್ಲಿ ಅತಿ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡ ಐವರು ಸುಸ್ತಿದಾರರ ಪಟ್ಟಿ ಮಾಡಿಕೊಂಡು ನೋಟಿಸ್ ನೀಡಿ ವಸೂಲಿ ಮಾಡುವಂತೆ ಸೂಚಿಸಲಾಗಿದೆ. ಆಸ್ತಿ ವಿವರ ತಪ್ಪು ಮಾಹಿತಿ ನೀಡಿದವರ ಪತ್ತೆ ಮಾಡಿ ತೆರಿಗೆ ವಸೂಲಿಗೂ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದ್ದಾರಲ್ಲದೆ, ಅನ್ಯಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತಂದು ಆಸ್ತಿ ತೆರಿಗೆ ವಸೂಲಿಗೆ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ.

ಸಂಯುಕ್ತ ಕರ್ನಾಟಕ

| Date | 20-11-2020 |
|---|---|
| Page No | 3 |

# ಮತದಾರರ ಪಟ್ಟಿ ಪರಿಷ್ಕರಣೆ

**ಬೆಂಗಳೂರು:** ಕೇಂದ್ರ ಚುನಾವಣಾ ಆಯೋಗದ ಸೂಚನೆಯಂತೆ ಕರ್ನಾಟಕದ 224 ವಿಧಾನಸಭಾ ಕ್ಷೇತ್ರಗಳಲ್ಲಿ ಭಾವಚಿತ್ರ ಇರುವ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆಯನ್ನು ಆರಂಭಿಸಲಾಗಿದೆ. ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ, ತಿದ್ದುಪಡಿ, ವರ್ಗಾವಣೆ, ತೆಗೆದು ಹಾಕುವುದಕ್ಕೆ, ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ, ತಿದ್ದುಪಡಿ, ಪಟ್ಟಿಯಿಂದ ಹೆಸರು ತೆಗೆದು ಹಾಕಲು ಡಿಸೆಂಬರ್ 17ರ ತನಕ ಅರ್ಜಿ ಸಲ್ಲಿಸುವುದಕ್ಕೆ ಅವಕಾಶ ನೀಡಲಾಗಿದೆ. ನವೆಂಬರ್ 22, 29 ಮತ್ತು ಡಿಸೆಂಬರ್ 6 ಮತ್ತು 16ರಂದು ವಿಶೇಷ ಪ್ರಚಾರ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ. ಹೊಸದಾಗಿ ಸಲ್ಲಿಕೆಯಾಗಿ ಅರ್ಜಿಗಳನ್ನು ಇತ್ಯರ್ಥಗೊಳಿಸಲು ಜನವರಿ 7 ಕೊನೆಯ ದಿನ. ಹೊಸ ಕರಡು ಮತದಾರರ ಪಟ್ಟಿಯನ್ನು ಜನವರಿ 14ರೊಳಗೆ ಪ್ರಕಟಿಸಲಾಗುತ್ತದೆ. ಭಾವಚಿತ್ರ ಇರುವ ಅಂತಿಮ ಮತದಾರರ ಪಟ್ಟಿ ಜನವರಿ 18ರಂದು ಪ್ರಕಟವಾಗಲಿದೆ. ನವೆಂಬರ್ 22 ರಿಂದ ಪ್ರತಿ ಭಾನುವಾರಗಳಂದು ತಮ್ಮ ಮತಗಟ್ಟೆಗಳಲ್ಲಿ ಮತಗಟ್ಟೆ ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸಿ, ನಿಗದಿತ ನಮೂನೆ ಅರ್ಜಿಗಳನ್ನು ಸಲ್ಲಿಸುವಂತೆ ಚುನಾವಣಾ ಆಯೋಗ ಮನವಿ ಮಾಡಿಕೊಂಡಿದೆ.

ಸಂಯುಕ್ತ ಕರ್ನಾಟಕ

| Date | 20-11-2020 |
|---|---|
| Page No | 3 |

# ಪೋಲಿಯೋ ಮಾದರಿ ಕೊರೊನಾ ಲಸಿಕೆ ನೀಡಿಕೆ

**ಬೆಂಗಳೂರು:** ಕೊರೊನಾ ಸೋಂಕನ್ನು ತಡೆಗಟ್ಟಲು ಪಲ್ಸ್ ಪೋಲಿಯೋ ಕಾರ್ಯಕ್ರಮದ ಮಾದರಿಯಲ್ಲಿ ಕೊರೋನಾ ಸೋಂಕಿನ ಲಸಿಕೆ ಹಾಕುವ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೊದಲ ಹಂತದಲ್ಲಿ 95 ಸಾವಿರ ಕೊರೊನಾ ವಾರಿಯರ್ಸ್‌ಗೆ ವ್ಯಾಕ್ಸಿನ್ ನೀಡುವುದಕ್ಕೆ ತೀರ್ಮಾನಿಸಿದ್ದು, ಪಲ್ಸ್ ಪೋಲಿಯೋ ಕಾರ್ಯಕ್ರಮದ ಮಾದರಿಯಲ್ಲಿ ವ್ಯಾಕ್ಸಿನ್ ಹಾಕುವುದಕ್ಕೆ ವ್ಯವಸ್ಥೆ ಮಾಡಿಕೊಳ್ಳಲಾಗುವುದು ಎಂದು ವಿವರಿಸಿದರು.

ಕೇಂದ್ರ ನೀಡುವ ಕೋವಿಡ್ ವ್ಯಾಕ್ಸಿನ್ ಅನ್ನು ಸಂಗ್ರಹಿಸುವುದಕ್ಕೆ ಬೇಕಾದ ಕೋಲ್ಡ್ ಸ್ಟೋರೇಜ್ ವ್ಯವಸ್ಥೆ ಬಿಬಿಎಂಪಿಯ ದಾಸಪ್ಪ ಆಸ್ಪತ್ರೆಯಲ್ಲಿ ಇದೆ. ಪಾಲಿಕೆ ಬಳಿ 180 ರೆಫ್ರಿಜರೇಟರ್ ಹಾಗೂ 150 ಡಿಪ್ ಫ್ರೀಜರ್‌ಗಳಿವೆ ಕೊರೋನಾ ವ್ಯಾಕ್ಸಿನ್ ಅನ್ನು ನಗರದ ಒಂದು ಕಡೆ ಸುರಕ್ಷಿತವಾಗಿ ಕೋಲ್ಡ್ ಸ್ಟೋರೇಜ್‌ನಲ್ಲಿ ಶೇಖರಣೆ ಮಾಡಿದ ಬಳಿಕ ಅನ್ನು ನಗರದ 141 ಪ್ರಾಥಮಿಕ ಆರೋಗ್ಯ ಕೇಂದ್ರ, 28 ಹೆರಿಗೆ ಆಸ್ಪತ್ರೆ, 6 ರೆಫರಲ್ ಆಸ್ಪತ್ರೆ, ಸರ್ಕಾರಿ ಆಸ್ಪತ್ರೆ, ಖಾಸಗಿ ಆಸ್ಪತ್ರೆ, ಮೆಡಿಕಲ್ ಕಾಲೇಜುಗಳಿಗೆ ಸಾಗಿಸುವುದಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದು ವಿವರಿಸಿದರು.

| Date | 20-11-2020 |
|---|---|
| Page No | 14 |



ದಾಸಪ್ಪ ಆಸ್ಪತ್ರೆ ಸುತ್ತ ಸಿಸಿ ಕ್ಯಾಮೆರಾ ಅಳವಡಿಕೆ | ಆಯುಕ್ತರಿಂದ ಸಂಗ್ರಹ ಘಟಕ ಪರಿಶೀಲನೆ

# ಕೊರೋನಾ ಲಸಿಕೆ ಸಂಗ್ರಹಿಸಿಡಲು ವ್ಯವಸ್ಥೆ

**ಬೆಂಗಳೂರು:** ಕೇಂದ್ರ ಸರ್ಕಾರದಿಂದ ಬರುವ ಕೊರೋನಾ ಲಸಿಕೆ ಸಂಗ್ರಹಿಸಿಡಲು ದಾಸಪ್ಪ ಆಸ್ಪತ್ರೆ, ಭರ್ಜರಿ ವ್ಯವಸ್ಥೆ ಮಾಡಲಾಗಿದ್ದು, ಇಗಾಗಲೇ ಆಸ್ಪತ್ರೆ ಸುತ್ತಮುತ್ತಲು ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ.

ದಾಸಪ್ಪ ಆಸ್ಪತ್ರೆಯಲ್ಲಿರುವ ಕೊರೋನಾ ಲಸಿಕೆ ಸ್ಟೋರೇಜ್ ಕೇಂದ್ರಕ್ಕೆ ಭೇಟಿ ನೀಡಿ ಸ್ಟೋರೇಜ್ ಬಾಕ್ಸ್ ಗಳ ಪರಿಶೀಲನೆ ನಡೆಸಿ ಮಾತನಾಡಿದ ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್ ಅವರು, ದಾಸಪ್ಪ ಆಸ್ಪತ್ರೆಯಲ್ಲಿ ಕೊರೋನಾ ವ್ಯಾಕ್ಸಿನ್‌ಗಳು ಹೆಚ್ಚಾದರೆ, ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋಲ್ಡ್ ಸ್ಟೋರೇಜ್ ಸೌಲಭ್ಯಯುಳ್ಳ ಆಸ್ಪತ್ರೆಯಲ್ಲಿ ಕೊರೋನಾ ಲಸಿಕೆ ಸಂಗ್ರಹ ಮಾಡಲು ವ್ಯವಸ್ಥೆ ಮಾಡಲಾಗುತ್ತಿದೆ ಎಂದರು.

**ವ್ಯಾಕ್ಸಿನ್ ವ್ಯಾನ್ ವ್ಯವಸ್ಥೆ:** ಕಳೆದ ಮಾರ್ಚ್ ಕೊರೋನಾ ವಾರಿಯರ್ಸ್‌ಗಳಿಗೆ ಕೆಲಸ ಮಾಡಿರುವ ಆರೋಗ್ಯ ಸಿಬ್ಬಂದಿ, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು, ಮೆಡಿಕಲ್ ಮತ್ತು ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು ಒಳಗೊಂಡ 95 ಸಾವಿರ ಕೊರೋನಾ ವಾರಿಯರ್ಸ್‌ಗಳ ಗುರುತಿಸಲಾಗಿದೆ. ಸರ್ಕಾರಿ ಆಸ್ಪತ್ರೆಗಳು, ಡೆಂಟಲ್, ಮೆಡಿಕಲ್, ಪ್ಯಾರಾ ಮೆಡಿಕಲ್

ಲಸಿಕೆಗಳನ್ನು ಸಾಗಿಸಲು ಪಾಲಿಕೆ ಅಧಿಕಾರಿಗಳೂ ವ್ಯಾಕ್ಸಿನ್ ವ್ಯಾನ್ ವ್ಯವಸ್ಥೆ ಸಿದ್ಧಪಡಿಸಿದ್ದಾರೆ. ರಾಜ್ಯದಲ್ಲಿ ಮಕ್ಕಳಿಗೆ ಪೋಲಿಯೋ ಹಾಕಿಸುವಾಗ ಯಾವ ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ. ಅದೇ ರೀತಿ ಕೊರೋನಾ ಲಸಿಕೆಯನ್ನು ಸಮರ್ಪಕವಾಗಿ ವಿತರಣೆ ಮಾಡಲಾಗುವುದು ಎಂದು ತಿಳಿಸಿದರು.





## 185 ರೆಫ್ರಿಜಿರೇಟರ್, 150 ಫ್ರೀಜರ್‌ಗಳ ವ್ಯವಸ್ಥೆ

ದಾಸಪ್ಪ ಆಸ್ಪತ್ರೆಯಲ್ಲಿ ಮೊದಲ ಹಂತದಲ್ಲಿ 185 ರೆಫ್ರಿಜಿರೇಟರ್, 150 ಫ್ರೀಜರ್‌ಗಳನ್ನು ವ್ಯವಸ್ಥೆ ಮಾಡಲಾಗಿದ್ದು, ದಾಸಪ್ಪ ಆಸ್ಪತ್ರೆಯಲ್ಲಿ ಲಸಿಕೆ ಸಂಗ್ರಹಿಸಿಡಲು ಪಾಲಿಕೆ ಅಧಿಕಾರಿಗಳು ಸಿದ್ಧತೆ ನಡೆಸುತ್ತಿದ್ದಾರೆ. ಇಗಾಗಲೇ ಆಸ್ಪತ್ರೆ ಸುತ್ತಮುತ್ತ ಸಿಸಿ ಕ್ಯಾಮರಾ ಅಳವಡಿಸಿದೆ. ಆಸ್ಪತ್ರೆಯ ಒಳಾಂಗಣದಲ್ಲಿ ಲಸಿಕೆ ಸಂಗ್ರಹಿಸಲು ಅಗತ್ಯ ಸಿದ್ಧತೆ ಮಾಡಲಾಗುತ್ತಿದೆ. ಇದಕ್ಕಾಗಿ ಕೋಲ್ಡ್ ಸ್ಟೋರೇಜ್ ಸೌಲಭ್ಯ ಕಲ್ಪಿಸಲಾಗುತ್ತಿದೆ.




## 881 ಸೋಂಕಿತರು ಗುಣಮುಖ



**ಬೆಂಗಳೂರು:** ನಗರದಲ್ಲಿ ಗುರುವಾರ 1048 ಜನರಿಗೆ ಕೊರೋನಾ ಸೋಂಕು ದೃಢಪಟ್ಟಿದೆ. 881 ಸೋಂಕಿತರು ಆಸ್ಪತ್ರೆಯಿಂದ ಮನೆಗೆ ತೆರಳಿದ್ದು, 14 ಜನರು ಮೃತಪಟ್ಟಿದ್ದಾರೆ. ನಗರದಲ್ಲಿ ಒಟ್ಟು 3,60,587 ಸೋಂಕಿತರು ದೃಢಪಟ್ಟಿದ್ದು, ಇಲ್ಲಿಯವರೆಗೆ 4042 ಜನರು ಸೋಂಕಿಗೆ ಬಲಿಯಾಗಿದ್ದಾರೆ. ಇಲ್ಲಿಯವರೆಗೆ 3,38,688 ಜನರು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಕೋವಿಡ್ ನಿಗದಿತ ಆಸ್ಪತ್ರೆಗಳು ಹಾಗೂ ಆರೋಗ್ಯ ಕೇಂದ್ರಗಳು ಹಾಗೂ ಆರೈಕೆ ಕೇಂದ್ರಗಳು ಒಳಗೊಂಡಂತೆ 17,856 ಜನ ಸಕ್ರಿಯ ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ.

ಗುರುವಾರದ ಬಿಬಿಎಂಪಿ ಕೋವಿಡ್ ವರದಿ ಪ್ರಕಾರ ಸಿಟಿಯಲ್ಲಿ ಒಟ್ಟು ಸಕ್ರಿಯ 2 ಕಂಟೈನ್ಮೆಂಟ್ ಜೋನ್‌ಗಳಿವೆ. ನಗರದ 11,19,802 ಜನರನ್ನು ಪ್ರಾಥಮಿಕ ಸಂಪರ್ಕಿತರನ್ನು ಗುರುತಿಸಲಾಗಿದ್ದು, ದ್ವಿತೀಯ ಸಂಪರ್ಕಿತ 13,01,691 ಜನರನ್ನು ಗುರುತಿಸಲಾಗಿದೆ. ಇದರಲ್ಲಿ ಪಾಸಿಟಿವ್ ಪ್ರಮಾಣ ಶೇ.9.14ರಷ್ಟಿದೆ. ಕೊರೋನಾದಿಂದ ಮೃತಪಟ್ಟವರ ಪ್ರಮಾಣ ಶೇ.1.12ರಷ್ಟಿದ್ದು, ಗುಣಮುಖರಾಗುತ್ತಿರುವ ಪ್ರಮಾಣ ಶೇ.93.93ರಷ್ಟಿದೆ.

ಹೊಸ ದಿಗಂತ

| Date | 20-11-2020 |
| --- | --- |
| Page No | 14 |

# ಮೂಲ ಕರ್ತವ್ಯಕ್ಕೆ ಮಾರ್ಷಲ್‌ಗಳ ನಿಯೋಜಿಸಿ

**ಬೆಂಗಳೂರು:** ನಗರದಲ್ಲಿ ಕಸದ ಬ್ಲಾಕ್ ಸ್ಪಾಟ್‌ಗಳು ಹೆಚ್ಚುತ್ತಿದ್ದು, ಬಿಬಿಎಂಪಿ ನೇಮಕ ಮಾಡಿಕೊಂಡಿರುವ ಮಾರ್ಷಲ್‌ಗಳನ್ನು ಮೂಲ ಕರ್ತವ್ಯಕ್ಕೆ ನಿಯೋಜಿಸಬೇಕು ಎಂದು ಆಮ್ ಆದ್ಮಿ ಪಕ್ಷದ ಮಹಿಳಾ ಮುಖಂಡರಾದ ಜನನಿ ಭರತ್ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮಾರ್ಷಲ್‌ಗಳನ್ನು ಬಿಬಿಎಂಪಿ ನೇಮಕ ಮಾಡಿಕೊಂಡಿದ್ದು, ಎಲ್ಲೆಂದರಲ್ಲಿ ಕಸ ಎಸೆಯುವವರನ್ನು ಹಿಡಿದು ದಂಡ ವಿಧಿಸಲು ಹಾಗೂ ಬ್ಲಾಕ್ ಸ್ಪಾಟ್‌ಗಳು ಹೆಚ್ಚಾಗದಂತೆ ನಿಗಾವಹಿಸುವ ಸಲುವಾಗಿ ಆದರೆ, ಬಿಬಿಎಂಪಿ ಈ ಕೆಲಸದಿಂದ ಇವರನ್ನು ಜನರ ಸುಲಿಗೆಗೆ ಇಳಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಸುಮಾರು 1038ಕ್ಕೂ ಹೆಚ್ಚು ಬ್ಲಾಕ್ ಸ್ಪಾಟ್ (ಕಸದ ರಾಶಿಗಳು) ಕಂಡು ಬಂದಿದೆ. ಇದರಿಂದ ಸೊಳ್ಳೆ, ಹಂದಿ, ಬೀದಿ ನಾಯಿಗಳ ಕಾಟ ವಿಪರೀತವಾಗಿದೆ, ಕಸದ ಮಾಫಿಯಾ ಜತೆ ಕೈ ಜೋಡಿಸಿರುವ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಿ ಎಂದರು.



ಜನದನಿಯ ಸಾರಥಿ
ವಾರ್ತಾ ಭಾರತಿ

| Date | 20-11-2020 |
| --- | --- |
| Page No | 7 |

# ರಾಜಧಾನಿಯ 57 ಮಂದಿ ಕಾಲೇಜು ವಿದ್ಯಾರ್ಥಿಗಳಿಗೆ ಕೊರೋನ ಸೋಂಕು ದೃಢ

ಬೆಂಗಳೂರು, ನ.19: ನಗರದ 57 ಮಂದಿ ಕಾಲೇಜು ವಿದ್ಯಾರ್ಥಿಗಳಿಗೆ ಕೊರೋನ ಸೋಂಕು ದೃಢಪಟ್ಟಿದೆ ಎಂದು ಬಿಬಿಎಂಪಿ ಆಯುಕ್ತ ಮಂಜನಾಥ್ ಪ್ರಸಾದ್ ತಿಳಿಸಿದ್ದಾರೆ.

2020-21ನೇ ಶೈಕ್ಷಣಿಕ ವರ್ಷದಲ್ಲಿ ಕಾಲೇಜು ಪ್ರಾರಂಭದ ಹಿನ್ನೆಲೆ ನಗರದಲ್ಲಿ 11 ಸಾವಿರ ಮಂದಿ ಕಾಲೇಜು ವಿದ್ಯಾರ್ಥಿಗಳಿಗೆ ಕೊರೋನ ಪರೀಕ್ಷೆ ನಡೆಸಲಾಗಿದ್ದು, ಈ ಪೈಕಿ 7,753 ಮಂದಿಯ ವರದಿ ಬಂದಿದೆ. ಇದರಲ್ಲಿ 57 ಮಂದಿ ವಿದ್ಯಾರ್ಥಿಗಳಿಗೆ ಕೊರೋನ ಸೋಂಕು ಧೃಡವಾಗಿದೆ ಎಂದು ಅವರು ತಿಳಿಸಿದ್ದಾರೆ.

ಕೊರೋನ ಸೋಂಕು ಹಿನ್ನೆಲೆ ವಿದ್ಯಾರ್ಥಿಗಳಿಗೆ ಈ ಹಿಂದೆ ಆನ್‌ಲೈನ್ ತರಗತಿಗಳನ್ನು ನಡೆಸಲಾಗುತ್ತಿತ್ತು. ಈಗ ನ.17ರಿಂದ ಪದವಿ ಹಾಗೂ ಸ್ನಾತಕೋತ್ತರ ಪದವಿಗಳು ಪ್ರಾರಂಭ ಮಾಡಲಾಗಿತ್ತು. ಕಾಲೇಜು ಪ್ರಾರಂಭವಾದ ಮೂರು ದಿನದೊಳಗೆ 57 ಮಂದಿ ವಿದ್ಯಾರ್ಥಿಗಳಿಗೆ ಕೊರೋನ ಸೋಂಕು ದೃಢಪಟ್ಟಿರುವುದು ಪೋಷಕರಲ್ಲಿ ಹಾಗೂ ಉಪನ್ಯಾಸಕರಲ್ಲಿ ಆತಂಕವನ್ನು ಮೂಡಿಸಿದೆ.

ಜಯ ಕಿರಣ
JAYAKIRANA MORNING DAILY ವಸ್ತುನಿಷ್ಠ ಸುದ್ದಿ-ಮಾಹಿತಿಗಳ ಪ್ರತಿಬಿಂಬ

| Date | 20-11-2020 |
| --- | --- |
| Page No | 1 |

# ರಾಜಧಾನಿ ಕೆರೆಗಳ ಮೇಲೆ 'ಡ್ರೋಣ್' ಕಣ್ಗಾವಲು

## ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕೆರೆಗಳ ಮಾಲಿನ್ಯ ತಡೆಗೆ ಕ್ರಾಂತಿಕಾರಿ ಹೆಜ್ಜೆ

ಬೆಂಗಳೂರು: ರಾಜಧಾನಿಯ ಹಸಿರು, ಉಸಿರು, ಆರೋಗ್ಯ, ಸೌಂದರ್ಯ ಎಲ್ಲಕ್ಕೂ ಪ್ರಮುಖ ಕಾರಣವಾಗಿರುವ ಕೆರೆಗಳು ಇವತ್ತು ಅಕ್ಷರಶಃ ರೊಚ್ಚೆ ಗುಂಡಿಗಳಾಗಿರುವುದು ಎಲ್ಲರಿಗೂ ಗೊತ್ತಿದೆ. ನೂರಾರು ಕೋಟಿಗಳನ್ನು ಕೆರೆಗಳ ಸಂರಕ್ಷಣೆ, ನಿರ್ವಹಣೆಗೆಂದು ಖರ್ಚು ಮಾಡುತ್ತಿದ್ದರೂ ಅವೆಲ್ಲವೂ ಗುತ್ತಿಗೆದಾರ, ಅಧಿಕಾರಿ ಹಾಗೂ ಚುನಾಯಿತ ಪ್ರತಿನಿಧಿಯ ಅಡ್ಜಸ್ಟ್ಮೆಂಟ್ ವ್ಯವಹಾರದಲ್ಲಿ ಸೋರಿ ಹೋಗುತ್ತಿರುವುದು ವಿಪರ್ಯಾಸ.





ರಾಜಧಾನಿ ಬೆಂಗಳೂರಿನಲ್ಲಿರುವ ಕೆರೆಗಳು ದುಃಸ್ಥಿತಿಗೆ ತಲುಪಲು ಕಾರಣವಾದ ಅಂಶಗಳ ಬಗ್ಗೆ ತಡವಾಗಿಯಾದರೂ ಎಚ್ಚೆತ್ತುಕೊಂಡಿರುವ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಇದೀಗ ಹೊಸ ಹೆಜ್ಜೆಯಿಡಲು ಮುಂದಾಗಿದೆ. ಕೆರೆಗಳ ಮಾಲಿನ್ಯಕ್ಕೆ ಕಾರಣವಾಗುತ್ತಿರುವವರ ಮೇಲೆ ಡ್ರೋಣ್ ಕ್ಯಾಮೆರಾ ನಿಗಾ ಇಡಲು ನಿರ್ಧರಿಸಿದೆ. ಡ್ರೋಣ್ ಮೂಲಕ ಕೆರೆಯ ಒಟ್ಟು ವಿಸ್ತಾರವನ್ನು ಸೆರೆಹಿಡಿದು

ಕೊನೆಯ ಪುಟಕ್ಕೆ

# ಕಣ್ಗಾವಲು

ಮಾಲಿನ್ಯವನ್ನು ತಡೆಗಟ್ಟುವ ಜೊತೆಗೆ ಅದಕ್ಕೆ ಕಾರಣವಾಗುತ್ತಿರುವ ಕಿಡಿಗೇಡಿಗಳ ವಿರುದ್ಧ ಕ್ರಮಕೈಗೊಳ್ಳಲು ಚಿಂತನೆ ನಡೆಸಿದೆ.

ಅನ್ನೇಮಡ್ ಏರಿಯಲ್ ವೆಹಿಕಲ್ಸ್ ಎನ್ನುವ ವಿಶೇಷ ತಂತ್ರಜ್ಞಾನಾಧಾರಿತ ಉಪಕರಣಗಳನ್ನು ಬಳಸಿ ರಾಜಧಾನಿಯ ಕೆರೆಗಳ ಮೇಲೆ ನಿಗಾ ಇಡಲು ಮುಂದಾಗಿರುವ ಮಾಲಿನ್ಯ ನಿಯಂತ್ರಣ ಮಂಡಳಿಯ ಕಾರ್ಯಕ್ಕೆ ಸಾರ್ವಜನಿಕವಾಗಿ ಮೆಚ್ಚುಗೆ ಕೂಡ ವ್ಯಕ್ತವಾಗಿದೆ. ಈ ವೆಹಿಕಲ್ಸ್‌ಗಳು ಎಂತಹುದೇ ಕೆರೆಯ ಯಾವುದೇ ಭಾಗಕ್ಕೂ ತೆರಳಿ ಕೆರೆಯ ನೀರಿನ ಮಾದರಿಯನ್ನು ಕಲೆಕ್ಟ್ ಮಾಡಿಕೊಂಡು ಬರುವ ಸಾಮರ್ಥ್ಯವನ್ನು ಹೊಂದಿವೆ. ಅಲ್ಲದೆ ಕೆರೆಯ ನಾಲ್ಕೂ ದಿಕ್ಕುಗಳಲ್ಲಿಯೂ ಸಂಚರಿಸಿ ಕೆರೆಗೆ ಸೇರುತ್ತಿರುವ ಮಾಲಿನ್ಯದ ಮೂಲವನ್ನು ಹುಡುಕಬಲ್ಲ ವ್ಯವಸ್ಥೆಯನ್ನು ಹೊಂದಿದೆ.

ಬೆಳ್ಳಂದೂರು, ವರ್ತೂರು, ಮಡಿವಾಳ ಸೇರಿದಂತೆ ರಾಜಧಾನಿಯ ಬೃಹತ್ ಕೆರೆಗಳು ಸಂಪೂರ್ಣ ಕಲುಷಿತವಾಗಿರುವ ಹಿನ್ನೆಲೆಯಲ್ಲಿ ಅವುಗಳ ಸುರಕ್ಷತೆ, ಸಂರಕ್ಷಣೆ ಹಾಗೂ ಸ್ವಚ್ಛತೆಗೆ ಹರಸಾಹಸವನ್ನೇ ಮಾಡಲಾಗುತ್ತಿದೆ. ನೂರಾರು ಕೋಟಿಗಳನ್ನು ಇದಕ್ಕಾಗಿಯೇ ವ್ಯಯಿಸಲಾಗುತ್ತಿದ್ದರೂ ಅದೆಲ್ಲವೂ ನೀರಿನಲ್ಲಿ ಹೋಮ ಮಾಡಿದಂತಾಗುತ್ತಿದೆಯೇ ಹೊರತು ಕೆರೆಗಳು ಸ್ವಚ್ಛವಾಗುತ್ತೂ ಇಲ್ಲ. ಅವುಗಳಿಂದ ರಾಜಧಾನಿ ಬೆಂಗಳೂರಿಗೂ ಯಾವುದೇ ರೀತಿಯಲ್ಲಿ ಉಪಕಾರವಾಗುತ್ತಿಲ್ಲ.

ಈ ಎಲ್ಲ ಅಂಶಗಳನ್ನು ಮನಗಂಡಿಯೇ ಇದೀಗ ಮಾಲಿನ್ಯ ನಿಯಂತ್ರಣ ಮಂಡಳಿ ಕ್ರಾಂತಿಕಾರಿ ಹೆಜ್ಜೆ ಇಡಲು ಮುಂದಾಗಿದೆ. ಮನುಷ್ಯರ ಸಹಾಯವಿಲ್ಲದೆ ಡ್ರೋಣ್‌ಗಳ ಮೂಲಕವೇ ಮಾಲಿನ್ಯ ಹಾಗೂ ಅದರ ಮೂಲವನ್ನು ಪತ್ತೆ ಮಾಡಿ, ಮಾಲಿನ್ಯಕ್ಕೆ ಕಾರಣರಾಗುವವರ ಹೆಡೆಮುರಿ ಕಟ್ಟಲು ಮುಂದಾಗಿದೆ. ಒಂದು ವೇಳೆ ನಿರೀಕ್ಷೆಯಂತೆ ಎಲ್ಲವೂ ಆದರೆ ಬೆಂಗಳೂರಿನ ಕೆರೆಗಳ ಆರೋಗ್ಯ ಹಾಗೂ ಅಸ್ತಿತ್ವ ಉಳಿದು ಗತವೈಭವ ಮರುಕಳಿಸುವುದರಲ್ಲಿ ಅನುಮಾನವೇ ಇಲ್ಲ.

ಜಯ ಕಿರಣ
JAYAKIRANA MORNING DAILY ವಸ್ತುನಿಷ್ಠ ಸುದ್ದಿ-ಮಾಹಿತಿಗಳ ಪ್ರತಿಬಿಂಬ

| Date | 19-11-2020 |
| --- | --- |
| Page No | 1 |

# ಕಮಿಷನರ್ ಸಾಹೇಬ್ರೇ.. ಪ್ಲೀಸ್ 2 ತಿಂಗ್ಳ ಸಂಬ್ಳ ಕೊಡಿ ಸರ್...

## ಕೊರೊನಾ ಡ್ಯೂಟಿಯಲ್ಲಿರುವ ಅರೆವೈದ್ಯಕೀಯ ಸಿಬ್ಬಂದಿಗಿಲ್ಲ ಸಂಬಳ ಭಾಗ್ಯ

ಬೆಂಗಳೂರು: ಕೊರೊನಾ ಯೋಧರಾಗಿ ಕೆಲಸ ಮಾಡುತ್ತಿರುವ ಬಿಬಿಎಂಪಿ ಆರೋಗ್ಯ ಇಲಾಖೆಯ ಸಿಬ್ಬಂದಿಗೆ 2 ತಿಂಗಳಾದರೂ ವೇತನ ಹಾಗೂ ಭತ್ಯೆ ನೀಡಲಾಗಿಲ್ಲ ಎನ್ನುವ ಮಾತು ಕೇಳಿಬರುತ್ತಿದೆ.

ಪ್ರತಿ ತಿಂಗಳು 15 ಸಾವಿರ ಸಂಬಳದೊಂದಿಗೆ 5,000 ಭತ್ಯೆ ನೀಡುವುದಾಗಿ ಹೇಳಿ ಆಯ್ಕೆ ಮಾಡಿಕೊಂಡಿದ್ದ ನೂರಾರು ಸಿಬ್ಬಂದಿ ತಿನ್ನಲು ಊಟವಿಲ್ಲದೆ, ಇರಲು ವಸತಿಯಿಲ್ಲದೆ ಪರದಾಡುವಂಥ ಸ್ಥಿತಿ ನಿರ್ಮಾಣವಾಗಿರುವುದು ದುರದೃಷ್ಟಕರ.

ಬಿಬಿಎಂಪಿಯಲ್ಲಿ ಕೆಲಸ ಮಾಡುವ ಅರೆ ವೈದ್ಯಕೀಯ ಸಿಬ್ಬಂದಿಯಿಂದ ಕೊರೊನಾ ತಪಾಸಣೆ ಪರಿ



ಎನ್. ಮಂಜುನಾಥ




ಕೊರೊನಾ ಯೋಧರ ಪ್ರತಿಭಟನೆ



ಡಾ.ಮಂಜುನಾಥ್

ಣಾಮಕಾರಿಯಾಗಿ ನಡೆಯುತ್ತಿದ್ದರೂ, ಸೋಂಕಿನ ಪ್ರಮಾಣ ಹೆಚ್ಚಿದ ಹಿನ್ನೆಲೆಯಲ್ಲಿ ಸರ್ಕಾರದ ಮುಖೇನ ಬಿಬಿಎಂಪಿ ಆಡಳಿತ ವ್ಯವಸ್ಥೆ ಸಾಕಷ್ಟು ಸಂಖ್ಯೆಯ ಸಿಬ್ಬಂದಿಯನ್ನು ನಿಯೋಜಿಸಿಕೊಂಡಿತ್ತು. ಅವರಿಗೆ ಸ್ವಾಬ್ ಟೆಸ್ಟ್ ಮಾಡುವ ತರಬೇತಿಯನ್ನು ನೀಡಿತ್ತು. ಇದರಲ್ಲಿ ಬಹುತೇಕ ಕಾಲೇಜು ವಿದ್ಯಾರ್ಥಿಗಳಿದ್ದರು. ಈಗಾಗಲೇ ಕೆಲಸ ಮಾಡುತ್ತಿರುವ ಅರೆ ವೈದ್ಯಕೀಯ ಸಿಬ್ಬಂದಿಗಿಂತ ಹೆಚ್ಚಿನ ವೇತನ ಹಾಗೂ ಭತ್ಯೆಯನ್ನು ನೀಡುವ ಈ ಆಫರ್ಗೆ ಸಾಕಷ್ಟು ವಿರೋಧವೂ ವ್ಯಕ್ತವಾಗಿತ್ತು.

ಆದರೆ ಕೊರೊನಾ ಹತೋಟಿಗೆ ತರಲೇಬೇಕಾದ ಕಾರಣಕ್ಕೆ ಈ ವ್ಯವಸ್ಥೆಯನ್ನು ಒಪ್ಪಿಕೊಳ್ಳಲಾಯಿತಾದರೂ ಎಲ್ಲೋ ಒಂದೆಡೆ ಆ ಅರೆವೈದ್ಯಕೀಯ ಸಿಬ್ಬಂದಿಗೆ ಸರಿಯಾದ ನ್ಯಾಯ ಸಲ್ಲಿಸುವಲ್ಲಿ ಆಡಳಿತ ವ್ಯವಸ್ಥೆ ವಿಫಲವಾಯಿತಾ? ಎನ್ನುವ ಅನುಮಾನ ಕಾಡುವ ರೀತಿಯಲ್ಲಿ ಕೊನೆಯ ಪುಟಕ್ಕೆ

ಜಯ ಕಿರಣ
JAYAKIRANA MORNING DAILY ವಸ್ತುನಿಷ್ಠ ಸುದ್ದಿ-ಮಾಹಿತಿಗಳ ಪ್ರತಿಬಿಂಬ

| Date | 19-11-2020 |
| --- | --- |
| Page No | 8 |

# ಸರ್...

ಬಿಬಿಎಂಪಿ ನಡೆದುಕೊಳ್ಳುತ್ತಿದೆ. ಅತ್ಯಂತ ಅನಾರೋಗ್ಯಕರ ಹಾಗೂ ಆತಂಕಕಾರಿ ವಾತಾವರಣದಲ್ಲಿ ಕೆಲಸ ಮಾಡುತ್ತಿರುವ ಅರೆವೈದ್ಯಕೀಯ ಸಿಬ್ಬಂದಿಗೆ ಎರಡು ತಿಂಗಳಿಂದ ಸಂಬಳವಾಗಿಲ್ಲ ಎನ್ನುವುದು ಶಾಕಿಂಗ್ ನ್ಯೂಸೇ ಸರಿ. ಈ ಬಗ್ಗೆ ತಮ್ಮ ಅಳಲನ್ನು 'ಜಯಕಿರಣ'ದೊಂದಿಗೆ ಸಾಕಷ್ಟು ಸಿಬ್ಬಂದಿ ತೋಡಿಕೊಂಡಿದ್ದಾರೆ ಕೂಡಾ.

ಕೊರೊನಾ ಸಂಕಷ್ಟದ ನಡುವೆಯೂ ಒಂದು ದಿನ ರಜೆಯನ್ನೂ ಪಡೆಯದೆ ಯೋಧರಾಗಿ ಕೆಲಸ ಮಾಡುತ್ತಿದ್ದೇವೆ. ನಮ್ಮ ಸಂಕಷ್ಟ ಏನೆಂದು ಆಡಳಿತಾಧಿಕಾರಿ ಗೌರವ ಗುಪ್ತ, ಕಮೀಷನರ್ ಮಂಜುನಾಥ ಪ್ರಸಾದ್, ವಿಶೇಷ ಆಯುಕ್ತ ರಂದೀಪ್ ಅವರಿಗೂ ಗೊತ್ತು. ತಮ್ಮ ಸಂಕಷ್ಟವನ್ನು ಅವರ ಬಳಿ ಈಗಾಗಲೇ ತೋಡಿಕೊಂಡಿದ್ದೇವೆ. ಇಷ್ಟಾದರೂ ನಮಗೆ ಎರಡು ತಿಂಗಳಿನಿಂದ ಸಂಬಳವಾಗಿಲ್ಲ. ಬಹುತೇಕ ಮಂದಿ ಬೆಂಗಳೂರಿನ ಹೊರ ಜಿಲ್ಲೆಯವರಾಗಿರುವುದರಿಂದ ಇಲ್ಲಿ ಬಾಡಿಗೆ ಕಟ್ಟಿಕೊಂಡು ವಾಸ ಮಾಡುತ್ತಿದ್ದೇವೆ.

ತಿಂಗಳ ಕಮಿಟ್ಮೆಂಟ್ ಜೊತೆಗೆ ಮನೆ ಮಾಲೀಕರ ಜಬರ್ದಸ್ತಿಯಿಂದ ಜೀವನ ನಡೆಸುವುದು ಕಷ್ಟವಾಗುತ್ತಿದೆ. ನಮ್ಮ ಎರಡು ತಿಂಗಳ ಸಂಬಳವನ್ನು ನೀಡಿದರೆ ನೆಮ್ಮದಿಯಾಗಿರಬಹುದು. ಕಮೀಷನರ್ ಮಂಜುನಾಥ್ ಪ್ರಸಾದ್ ಸಾಹೇಬರು ನಮ್ಮ ಅಳಲಿಗೆ ಈಗಲಾದರೂ ಸ್ಪಂದಿಸಬೇಕು ಎಂದು ಪತ್ರಿಕೆಯ ಮೂಲಕ ಮನವಿ ಮಾಡಿಕೊಂಡಿದ್ದಾರೆ.

ಆದರೆ ಸಿಬ್ಬಂದಿಗೆ 2 ತಿಂಗಳಿನಿಂದ ಸಂಬಳವಾಗಿಲ್ಲ ಎನ್ನುವ ಮಾತನ್ನು ಮಂಜುನಾಥ್ ಪ್ರಸಾದ್ ಒಪ್ಪಿಕೊಳ್ಳುತ್ತಿಲ್ಲ. 'ಜಯಕಿರಣ' ಈ ಬಗ್ಗೆ ಅವರನ್ನು ಪ್ರಶ್ನಿಸಿದಾಗ, ಸಮಸ್ಯೆ ಇದ್ದದ್ದು ನಿಜ. ಆದರೆ ಈಗ ಬಗೆಹರಿದಿದೆ. ಈ ಸಿಬ್ಬಂದಿಯೂ ಸೇರಿದಂತೆ ವೈದ್ಯರಿಗೂ ಸಂಬಳ ಬಿಡುಗಡೆ ಮಾಡಲಾಗಿದೆ. ಕೊರೊನಾದಂತಹ ಸಂದರ್ಭದಲ್ಲಿ ತಮ್ಮ ಪ್ರಾಣ ಒತ್ತೆ ಇಟ್ಟು ಕೆಲಸ ಮಾಡುತ್ತಿರುವ ಅರೆ ವೈದ್ಯಕೀಯ ಸಿಬ್ಬಂದಿಯ ಸಂಕಷ್ಟ ಏನು ಎನ್ನುವುದು ನನಗೂ ಗೊತ್ತು. ಅವರ ಹಿತ ಕಾಯಲು ಬಿಬಿಎಂಪಿ ಬದ್ಧವಾಗಿದೆ ಎಂದರು.

ಸಂಜೆವಾಣಿ
1982



| Date | 19-11-2020 |
|---|---|
| Page No | 7 |



# ಮರಗಳ ತೆರವು ಬಹಿರಂಗಕ್ಕೆ ಸೂಚನೆ

ಬೆಂಗಳೂರು, ನ.19– ನಗರ ವ್ಯಾಪ್ತಿಯಲ್ಲಿ ಯಾವುದೇ ಮರವನ್ನು ಕತ್ತರಿಸಿ ತೆರವು ಮಾಡಲು ಅಥವಾ ಸ್ಥಳಾಂತರಿಸಲು ಅನುಮತಿ ನೀಡಿದರೆ ಆ ಕುರಿತ ಎಲ್ಲ ಮಾಹಿತಿಗಳನ್ನು ಪಾಲಿಕೆ ಅಧಿಕೃತ ವೆಬ್ ಸೈಟ್‌ನಲ್ಲಿ ತಪ್ಪದೇ ಪ್ರಕಟಿಸಬೇಕು ಎಂದು ಹೈಕೋರ್ಟ್ ಬಿಬಿಎಂಪಿಗೆ ನಿರ್ದೇಶಿಸಿದೆ.

ರಾಜಧಾನಿ ಬೆಂಗಳೂರಿನಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗಾಗಿ ಮರಗಳನ್ನು ಕತ್ತರಿಸುತ್ತಿರುವುದನ್ನು ಪ್ರಶ್ನಿಸಿ ಬೆಂಗಳೂರು ಎನ್ವಿರಾನ್ಮೆಂಟ್ ಟ್ರಸ್ಟ್ ಹಾಗೂ ದತ್ತಾತ್ರೇಯ ಟಿ. ದೇವರೆ ಎಂಬುವವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಕೆಲಕಾಲ ವಾದ–ಪ್ರತಿವಾದ ಆಲಿಸಿದ ಪೀಠ, ಮರಗಳನ್ನು ತೆರವು ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ತಜ್ಞರ ಸಮಿತಿ ನೀಡಿರುವ ಶಿಫಾರಸ್ಸುಗಳನ್ನು ಪಾಲಿಕೆ ಅಳವಡಿಸಿಕೊಳ್ಳಬೇಕು.

ಮರಗಳನ್ನು ಕತ್ತರಿಸುವ ಅಥವಾ ತೆರವು ಮಾಡುವ ಪ್ರಕ್ರಿಯೆಗಳು ಅತ್ಯಂತ ಪಾರದರ್ಶಕವಾಗಿರಬೇಕು. ಹೀಗಾಗಿ ಮರಗಳನ್ನು ತೆರವು ಮಾಡುವ ಕುರಿತಂತೆ ಎಲ್ಲಾ ವಿಷಯಗಳನ್ನು ಪಾಲಿಕೆ ವೆಬ್ ಸೈಟ್‌ನಲ್ಲಿ ಪ್ರಕಟಿಸಬೇಕೆಂದು ನಿರ್ದೇಶಿಸಿತು.

ಈ ಸಂದರ್ಭದಲ್ಲಿ ನಮ್ಮ ಮೆಟ್ರೋ ರೈಲು ಯೋಜನೆಗಾಗಿ ಮರಗಳನ್ನು ಕತ್ತರಿಸುವುದಕ್ಕೆ ನೀಡಿದ್ದ ಮಧ್ಯಂತರ ತಡೆಯಾಜ್ಞೆಯನ್ನು ಹೈಕೋರ್ಟ್ ವಿಸ್ತರಿಸಿತು.

ಸಂಜೆವಾಣಿ 1982

| Date | 19-11-2020 |
| --- | --- |
| Page No | 8 |

# ಕೊರೊನಾ ಲಸಿಕೆ ಸಂಗ್ರಹಕ್ಕೆ ಸಿದ್ಧತೆ

ಬೆಂಗಳೂರು, ನ.19– ಕೊರೋನಾ ಮಹಾಮಾರಿ ತಡೆಗೆ ಶೀಘ್ರದಲ್ಲಿಯೇ ಲಸಿಕೆ ಲಭ್ಯವಾಗಲಿದ್ದು, ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಮೊದಲ ಹಂತದ ಲಸಿಕೆ ಸಂಗ್ರಹಿಸಿಡಲಾಗುವ ಆಸ್ಪತ್ರೆಯ ಸುತ್ತಲೂ ಹದ್ದಿನ ಕಣ್ಣಿಡಲು ವ್ಯವಸ್ಥೆ ಮಾಡಲಾಗಿದೆ.

ಬಿಬಿಎಂಪಿ ಕೇಂದ್ರ ಕಚೇರಿಯಿಂದ ಕೂದಲಳತೆ ದೂರದಲ್ಲಿರುವ ದಾಸಪ್ಪ ಆಸ್ಪತ್ರೆಯಲ್ಲಿ ಲಸಿಕೆ ಸಂಗ್ರಹಕ್ಕೆ ಪಾಲಿಕೆ ಅಧಿಕಾರಿಗಳು ತಯಾರಿ ನಡೆಸುತ್ತಿದ್ದು, ಈ ಆಸ್ಪತ್ರೆ ಸುತ್ತಲೂ ಭದ್ರತೆ ಒದಗಿಸುವ ಸಂಬಂಧ ಚರ್ಚೆ ನಡೆಯುತ್ತಿದೆ. ಈಗಾಗಲೇ ಹತ್ತಿರದ ಟೌನ್ ಹಾಲ್, ಬಿಬಿಎಂಪಿ ದಾಸಪ್ಪ ಆಸ್ಪತ್ರೆ ಸುತ್ತಮುತ್ತ ಸಿಸಿ ಕ್ಯಾಮರಾ ಅಳವಡಿಸಿದೆ. ಜೊತೆಗೆ, ಆಸ್ಪತ್ರೆ ಒಳಾಂಗಣದಲ್ಲಿ ಲಸಿಕೆ ಸಂಗ್ರಹಿಸಲು ಅಗತ್ಯ ಸಿದ್ಧತೆ ಮಾಡುತ್ತಿದೆ. ಇದಕ್ಕಾಗಿ ಕೋಲ್ಡ್ ಸ್ಟೋರೇಜ್ ಸೌಲಭ್ಯ ಕಲ್ಪಿಸುತ್ತಿದೆ.

ಅದೇ ರೀತಿಯಲ್ಲಿ, ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋಲ್ಡ್ ಸ್ಟೋರೇಜ್ ಸೌಕರ್ಯಯುಳ್ಳ ಆಸ್ಪತ್ರೆಗಳಲ್ಲಿಯೂ ಸಂಗ್ರಹ ಮಾಡಲು ವ್ಯವಸ್ಥೆ ನೀಡಲಾಗುತ್ತಿದೆ. ಕೊರೊನಾ ಲಸಿಕೆಯನ್ನ ಸಾಗಿಸಲು ಪಾಲಿಕೆಯೂ ಅಧಿಕಾರಿಗಳು 'ವ್ಯಾಕ್ಸಿನ್ ವ್ಯಾನ್' ವ್ಯವಸ್ಥೆ ಸಹ ಸಿದ್ಧಪಡಿಸಿದ್ದಾರೆ.

**ಕೇಂದ್ರಕ್ಕೆ ಆಯುಕ್ತರು ಭೇಟಿ..!**
**ಟೌನ್‌ಹಾಲ್‌ನ ದಾಸಪ್ಪ ಆಸ್ಪತ್ರೆಯಲ್ಲಿರುವ ಕೊರೋನಾ ಲಸಿಕೆ ಸ್ಟೋರೇಜ್ ಕೇಂದ್ರಕ್ಕೆ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಭೇಟಿ ನೀಡಿ ಆಸ್ಪತ್ರೆಯಲ್ಲಿರುವ ದಾಸ್ತಾನು ಕೇಂದ್ರದ ಲಸಿಕೆ ಸ್ಟೋರ್ ಮಾಡುವ ಬಾಕ್ಸ್‌ಗಳ ಪರಿಶೀಲನೆ ನಡೆಸಿದರು.**